ಸಂಪುಟ : 8 ಸಂಚಿಕೆ 304 ಪುಟ : 4 ಬೆಲೆ : 3.00 ರವಿವಾರ ಜನವರಿ 14, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 304 Pages : 4 Price : 3.00 Sunday JANUARY 14, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಸಂಶೋಧಕರ ಒಕ್ಕೂಟ ಕ್ರೋಢೀಕರಿಸಿದ 'ಸದನದಲ್ಲಿ ಎಚ್.ಕೆ. ಪಾಟೀಲ' 5 ಸಂಪುಟಗಳ ಲೋಕಾರ್ಪಣೆ

# ಶಾಸಕರು ಸ್ವಯಂ ಅಂಕುಶ ಇಟ್ಟುಕೊಳ್ಳಬೇಕು

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

'ಸದನದಲ್ಲಿ ಎಚ್.ಕೆ. ಪಾಟೀಲ' ಸಂಪುಟ ಕೃತಿ ಮಾತ್ರವಲ್ಲದೆ, ಎಚ್.ಕೆ. ಪಾಟೀಲರ ದೀರ್ಘ ಕಾಲದ ರಾಜಕೀಯದ ಪ್ರರಿಶ್ರಮ, ತ್ಯಾಗ ಮತ್ತು ತಾಳ್ಮೆಯ ಸಂಕೇತವಾಗಿದೆ. ಈ ಮಟ್ಟಕ್ಕೆ ಅವರು ಬೆಳೆಯಲು ತಾಳ್ಮೆ, ಸಹನೆಯೇ ಮುಖ್ಯ ಕಾರಣ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಸಮಾರಂಭದಲ್ಲಿ 'ಸದನದಲ್ಲಿ ಎಚ್.ಕೆ. ಪಾಟೀಲ' 5 ಸಂಪುಟಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಎಚ್.ಕೆ. ಪಾಟೀಲರು ಸದನದಲ್ಲಿ ಮಾಡಿದ ಭಾಷಣ, ಮಂಡಿಸಿದ ವಿಚಾರಗಳನ್ನು ಸಮಾಜಕ್ಕೆ ಅರ್ಪಿಸುವ ಕೆಲಸ ಇದಾಗಿದೆ. ಅತ್ಯುನ್ನತ ಜನಪ್ರತಿನಿಧಿ ಸಿಕ್ಕಾಗಲೇ ಸಮಾಜ ಸುಧಾರಣೆ ಆಗಲಿದೆ ಎಂಬ ಕಾರಣಕ್ಕೆ ಪ್ರತಿಯೊಬ್ಬರೂ ಉತ್ತಮ ಜನಪ್ರತಿನಿಧಿಯನ್ನು ಬಯಸುತ್ತಾರೆ. ಅಂತಹ ಸಜ್ಜನ ರಾಜಕಾರಣಿ ಎಚ್.ಕೆ. ಪಾಟೀಲರಾಗಿದ್ದಾರೆ. ಈ ಸಂಪುಟಗಳು ಇಂದಿನ ಯುವಕರು ಸೇರಿ ರಾಜಕಾರಣಿಗಳಿಗೂ ಪ್ರಯೋಜನವಾಗಿದೆ ಎಂದರು.

ಮಾಜಿ ಸಭಾಪತಿ ವಿ.ಆರ್. ಸುದರ್ಶನ ಮಾತನಾಡಿ, ಎಚ್.ಕೆ. ಪಾಟೀಲ ನೀರಾವರಿ ಸಚಿವರಾದಾಗ ಅನೇಕ ಉತ್ತಮ ಯೋಜನೆ ತಂದು ತಮ್ಮದೇ ಆದ ಹೆಜ್ಜೆ ಗುರುತು ಮೂಡಿಸಿದ್ದಾರೆ. ಎಲ್ಲೇ ಅನ್ಯಾಯ ಆಗಿದ್ದರೂ ಅದರ ವಿರುದ್ಧ ಧ್ವನಿ ಎತ್ತಿ, ಸಮಸ್ಯೆ ಪರಿಹರಿಸಿದ್ದಾರೆ. ಒಂದು ರೀತಿ ಉತ್ತರ ಕರ್ನಾಟಕದ ಧ್ವನಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿಪಕ್ಷ ನಾಯಕರಾಗಿದ್ದಾಗ ತಮ್ಮ ಕ್ಷೇತ್ರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಪರಿಚಯಿಸಿದರು. ಇದೀಗ ಎಲ್ಲ ಗ್ರಾಮಗಳಲ್ಲಿ ಈ ಘಟಕಗಳು ಬಂದಿವೆ. ಇದಕ್ಕೆ ಪಾಟೀಲರೇ ಕಾರಣ ಎಂದರು. ▸▸3ನೇ ಪುಟಕ್ಕೆ




ಶಾಸಕರು ಸದನದಲ್ಲಿ ಎಷ್ಟು ಪ್ರಶ್ನೆ ಕೇಳಿದರು, ಏನು ಚರ್ಚೆ, ಭಾಷಣ ಮಾಡಿದರು ಎಂಬ ವಿಡಿಯೋ, ಆಡಿಯೋ ಅಥವಾ ಲಿಖಿತವಾಗಿರುದನ್ನು ಆಯಾ ಶಾಸಕರುಗಳಿಗೆ ತಲುಪಿಸುವ ಕಾರ್ಯವನ್ನು ಸಭಾಧ್ಯಕ್ಷರು, ಸಭಾಪತಿಗಳು ಮಾಡಬೇಕಿದೆ. ಈ ಮೂಲಕ ಶಾಸಕರು ತಮ್ಮ ಕ್ಷೇತ್ರಕ್ಕೆ ಏನು ಮಾಡುತ್ತಾರೆ ಎಂಬುದು ಕ್ಷೇತ್ರದ ಜನರಿಗೆ ಗೊತ್ತಾಗುತ್ತದೆ. ಕ್ಯೂಆರ್ ಕೋಡ್ ಮೂಲಕ ಶಾಸಕರ ಕಾರ್ಯವನ್ನು ವಿಶ್ಲೇಷಿಸುವ ಕಾರ್ಯ ಮಾಡಬೇಕೆಂದು ಸಚಿವ ಎಚ್.ಕೆ. ಪಾಟೀಲ ನುಡಿದರು.

> ಶಾಸಕರು ಸ್ವಯಂ ಅಂಕುಶವನ್ನು ಇಟ್ಟುಕೊಳ್ಳಬೇಕು. ಆದರೆ, ಕೆಲವು ಶಾಸಕರ ಮಾತು, ಕೃತಿಗಳ ಮೇಲೆ ಅಂಕುಶ ಇಲ್ಲದಾಗಿದೆ. ಹೀಗಾಗಿ ಸದನದಲ್ಲಿ ಕೆಟ್ಟ ಶಬ್ದಗಳನ್ನು ಬಳಸುವುದು, ಬಟ್ಟೆ ಹರಿದುಕೊಳ್ಳುವುದು, ಅಶ್ಲೀಲ ವಿಡಿಯೋ ನೋಡುವ ಪ್ರಸಂಗಗಳು ಈ ಹಿಂದೆ ನಡೆದಿವೆ. ನಮ್ಮ ತಪ್ಪುಗಳನ್ನು ತೋರಿಸಿದ ದೃಶ್ಯ ಮಾಧ್ಯಮವನ್ನು ವಿಧಾನಸಭೆಯಿಂದ ಹೊರ ಹಾಕಿದ ಘಟನೆಯೂ ನಡೆಯಿತು. ಇದರಿಂದಾಗಿ ಪ್ರಜಾಪ್ರಭುತ್ವ ತನ್ನ ತೂಕ ಮತ್ತು ಪಾವಿತ್ರ್ಯತೆ ಕಳೆದುಕೊಂಡಿತು. ಸಂಯಮ ಇದ್ದರೆ, ನಮ್ಮ ಮೇಲೆ ಅಂಕುಶ ಇದ್ದರೆ ಹೀಗಾಗುತ್ತಿರಲಿಲ್ಲ. ಇನ್ನಾದರೂ ನಾವು ಆತ್ಮಾವಲೋಕನ ಮಾಡಿಕೊಂಡು ವ್ಯವಸ್ಥೆಯನ್ನು ಸಮಗ್ರವಾಗಿ ಬದಲಿಸಬೇಕು.
>
> – **ಎಚ್.ಕೆ. ಪಾಟೀಲ.**
> ಕಾನೂನು, ಪ್ರವಾಸೋದ್ಯಮ ಸಚಿವರು.

## ಕೊನೆಯ ಉಸಿರು ಇರುವವರೆಗೂ ಕಾವೇರಿ ನೀರಿಗಾಗಿ ಹೋರಾಟ: ಹೆಚ್ .ಡಿ. ದೇವೇಗೌಡ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಕರ್ನಾಟಕಕ್ಕೆ ಅನ್ಯಾಯವಾಗಿದ್ದು, ಮತ್ತೆ ಪ್ರಧಾನಿಯಾಗಲಿರುವ ನರೇಂದ್ರ ಮೋದಿಯಿಂದ ಮಾತ್ರ ಕಾವೇರಿ ನೀರಿನ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಶನಿವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜೆಡಿಎಸ್ ಪಕ್ಷದ ಕೇಂದ್ರ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ 90 ವರ್ಷದ ಜೆಡಿಎಸ್ ವರಿಷ್ಠರು, ತಮ್ಮ ಕೊನೆಯ ಉಸಿರು ಇರುವವರೆಗೂ ಕಾವೇರಿ ನೀರಿಗಾಗಿ ಹೋರಾಟ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ಕರ್ನಾಟಕ ಎದುರಿಸುತ್ತಿರುವ ಕಾವೇರಿ ನೀರಿನ ಸಮಸ್ಯೆ ಬಗೆಹರಿಸುವ ಶಕ್ತಿ ಮೋದಿಗೆ ಮಾತ್ರ ಇದೆ ಎಂದರು.

ಕಾವೇರಿ ನೀರು ಬಿಡುವಂತೆ ಪ್ರತಿ ವರ್ಷ ತಮಿಳುನಾಡು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುತ್ತದೆ. ನಮಗೆ ನೀರಿಲ್ಲದಿದ್ದರೂ,ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀರು ಕೊಡಿ ಎಂದು ಹೇಳುತ್ತಾರೆ, ನಮ್ಮ ಅಧಿಕಾರಿಗಳು ಎಷ್ಟೇ ವಾದಿಸಿದರೂ ಪ್ರಯೋಜನವಾಗಿಲ್ಲ. ಕಾವೇರಿ ಜಲಾಶಯಗಳಲ್ಲಿ ಎಷ್ಟು ನೀರಿದೆ ಎಂಬುದನ್ನು ನೋಡಲು ಸಿಡಬ್ಲ್ಯುಎಂಎ ಕರ್ನಾಟಕಕ್ಕೆ ಭೇಟಿ ನೀಡಿಲ್ಲ. ಮತ್ತೆ ಪ್ರಧಾನಿಯಾಗಲಿರುವ ನರೇಂದ್ರ ಮೋದಿ ಅವರಿಂದ ಮಾತ್ರ ಕಾವೇರಿ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದು ಹೇಳಿದರು.

"ಕಾವೇರಿ ಸಮಸ್ಯೆಗೆ ಪರಿಹಾರವಿದೆ, ನಮಗೆ ಆಗಿರುವ ಅನ್ಯಾಯದ ಬಗ್ಗೆ ಪ್ರಧಾನಿ ಮೋದಿಯವರಿಗೆ ಅರಿವು ಮೂಡಿಸಲು ನಾವು ಒಟ್ಟಾಗಿ ಹೋರಾಡಬೇಕು. ಇದರಲ್ಲಿ ಯಾವುದೇ ರಾಜಕೀಯ ಬೇಡ, ಈ ಕಾರಣಕ್ಕಾಗಿ ರಾಜಕೀಯ ಪಕ್ಷಗಳು ಒಟ್ಟಾಗಿ ಹೋರಾಡಬೇಕು" ಎಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿದರು. ಇನ್ನು ಎರಡೂವರೆ ವರ್ಷ ರಾಜ್ಯಸಭೆಯಲ್ಲಿ ಇರುತ್ತೇನೆ, ಕೊನೆಯ ಉಸಿರು ಇರುವವರೆಗೂ ಕಾವೇರಿ ವಿಚಾರವಾಗಿ ಹೋರಾಟ ಮಾಡುತ್ತೇನೆ, ರಾಜ್ಯದ ಜನತೆಗೆ ನ್ಯಾಯ ಸಿಗುವವರೆಗೂ ಸುಮ್ಮನಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

### ಹಾಲಕೆರೆಯಲ್ಲಿ 'ಅಕ್ಷರ ಜಾತ್ರೆ' ಉದ್ಘಾಟಿಸಿದ ಬಸವರಾಜ ಪಾಟೀಲ ಸೇಡಂ

# ಉತ್ತಮ ಗುಣಗಳನ್ನು ಜೀವನದುದ್ದಕ್ಕೂ ಮುನ್ನಡೆಸಿ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ವಿದ್ಯಾರ್ಥಿಗಳು ತಮ್ಮ ಜೀವನಕ್ಕೆ ಅವಶ್ಯಕವಿರುವ ಜ್ಞಾನಕ್ಕಾಗಿ ಓದಬೇಕೇ ಹೊರತು ನೌಕರಿಗಾಗಿ ಎಂದಿಗೂ ಓದಬೇಡಿ ಎಂದು ರಾಜ್ಯಸಭಾ ಮಾಜಿ ಸದಸ್ಯ ಬಸವರಾಜ ಪಾಟೀಲ ಸೇಡಂ ಹೇಳಿದರು.

ಸಮೀಪದ ಹಾಲಕೆರೆ ಗ್ರಾಮದಲ್ಲಿ ನಡೆದಿರುವ ಜಾತ್ರಾ ಮಹೋತ್ಸವದ ಅಂಗವಾಗಿ 'ಅಕ್ಷರ ಜಾತ್ರೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲು ನಿನ್ನನ್ನು ನೀನು ತಿಳಿದುಕೋ. ನೌಕರಿಗಾಗಿ ಎಂದಿಗೂ ಜೋತು ಬೀಳಬೇಡ. ಕೊಡುವವನಾಗು ಹೊರತಾಗಿ ಬೇಡುವವನಾಗಬೇಡ. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಹೇಳುವಂತೆ, ಕನಸುಗಳು ದೊಡ್ಡದಾಗಿದ್ದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ಮನುಷ್ಯರಾಗಿ ನಿಮ್ಮಲ್ಲಿ ನೀವು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳದೆ ಇದ್ದರೆ ಜೀವನಕ್ಕೆ ಯಾವುದೇ ಬೆಲೆ ಇಲ್ಲ. ನಿಮ್ಮಲ್ಲಿನ ಉತ್ತಮ ಗುಣಗಳನ್ನು ಜೀವನದುದ್ದಕ್ಕೂ ಮುನ್ನಡೆಸಿಕೊಂಡು ಬನ್ನಿರಿ ಎಂದು ಪಾಟೀಲ ಹೇಳಿದರು.

ಗದುಗಿನಲ್ಲಿ ಪ್ರಾರಂಭವಾಗಲಿರುವ ಶ್ರೀ ಅನ್ನದಾನೇಶ್ವರ ವಿಜ್ಞಾನ ಕಾಲೇಜಿಗೆ ಶಂಕು ಸ್ಥಾಪನೆ ನೆರವೇರಿಸಿದ ಬಾಗಲಕೋಟೆ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, ಅಕ್ಷರ ಎಂಬುದೇ ಒಂದು ಅದ್ಭುತ ಕಲ್ಪನೆ. ಅದರ ಹೆಸರಿನಲ್ಲಿ ನಡೆದಿರುವ ಈ ಜಾತ್ರೆ ಬಹಳ ಅರ್ಥಪೂರ್ಣ. ನೀವೆಲ್ಲರೂ ಅಕ್ಷರವನ್ನು ಕಲಿತು ನಿಮ್ಮ ಜೀವನವನ್ನು ಸುಂದರಗೊಳಿಸಿಕೊಳ್ಳಿ ಎಂದರು.

ವೇದಿಕೆಯ ಮೇಲೆ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು, ಗದಗ ವಿವೇಕಾನಂದಾಶ್ರಮದ ನಿರ್ಭಯಾನಂದ ಮಹಾ ಸರಸ್ವತಿಗಳನ್ನೊಳಗೊಂಡಂತೆ ಅನೇಕ ಹರಗುರು ಚರ ಮೂರ್ತಿಗಳು, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಎಸ್‌ಎವಿವಿಪಿ ಸಮಿತಿ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಬಳೂಟಗಿ ಮತ್ತಿತರರಿದ್ದರು.



> ಶ್ರೀ ಅನ್ನದಾನೇಶ್ವರ ನಗರವನ್ನು ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಈ ಹಿಂದೆ ಮಠ-ಮಾನ್ಯಗಳು ಶಿಕ್ಷಣ ನೀಡಿ ಗ್ರಾಮೀಣ ಭಾಗದ ಜನರ ಬದುಕನ್ನು ಬೆಳಗಿವೆ. ಅದಕ್ಕಾಗಿ ನಾವೆಲ್ಲರೂ ಮಠಾಧೀಶರಿಗೆ ಎಂದಿಗೂ ಆಭಾರಿಯಾಗಿರಬೇಕು ಎಂದರು.

## ಆನಂದಸ್ವಾಮಿ ಗಡ್ಡದೇವರಮಠ ಅಭಿಮಾನಿ ಬಳಗದಿಂದ ನೆರವು



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಟ ಯಶ್ ಜನ್ಮದಿನದ ಹಿನ್ನೆಲೆಯಲ್ಲಿ ತಾಲೂಕಿನ ಸೂರಣಗಿ ಗ್ರಾಮದಲ್ಲಿ ಜ.7ರಂದು ತಡರಾತ್ರಿ ಯಶ್ ಅವರ ಕಟೌಟ್ ಅಳವಡಿಸುವ ವೇಳೆ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದ ಮುರಳಿ, ನವೀನ, ಹನಮಂತ ಈ ಮೂವರು ಯುವಕರ ಕುಟುಂಬಗಳಿಗೆ ಲಕ್ಷ್ಮೇಶ್ವರದ ಆನಂದಸ್ವಾಮಿ ಗಡ್ಡದೇವರಮಠ ಅಭಿಮಾನಿ ಬಳಗದಿಂದ ಶುಕ್ರವಾರ ತಲಾ 50 ಸಾವಿರ ರೂ ಸಹಾಯಧನ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ರಾಜೀವಗಾಂಧಿ ಪಂಚಾಯತರಾಜ್ ಸಂಘಟನೆಯ ತಾಲೂಕಾ ಸಂಚಾಲಕ ಫಕ್ಕಿರೇಶ ಮ್ಯಾಟಣ್ಣವರ, ಸೂರಣಗಿಯಲ್ಲಿ ನಡೆದ ಘಟನೆ ದುರ್ದೈವದ ಸಂಗತಿ. ಮೂವರು ಹರೆಯದ ಮಕ್ಕಳನ್ನು ಕಳೆದುಕೊಂಡ ಕುಟುಂಬಕ್ಕೆ ಸರ್ಕಾರ ಕೂಡಲೇ ಸ್ಪಂದಿಸಿ ಪರಿಹಾರ ಕಲ್ಪಿಸುವ ಜತೆಗೆ ಕುಟುಂಬಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿ ಕುಟುಂಬಸ್ಥರಗೆ ಆತ್ಮಸ್ಥೈರ್ಯ ತುಂಬಿದ್ದಾರೆ. ಈ ನಿಟ್ಟಿನಲ್ಲಿ ಕಾಂಗ್ರೆಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದಸ್ವಾಮಿ ಗಡ್ಡದೇವರಮಠ ಅವರು ಸಂಕಷ್ಟದಲ್ಲಿರುವ ಬಡ ಕುಟುಂಬಗಳಿಗೆ ಆಸರೆಯಾಗಲಿ ಎಂದು ಮೂರು ಕುಟುಂಬಗಳಿಗೆ ತಲಾ 50 ಸಾವಿರ ರೂ ಸಹಾಯಧನ ನೀಡಿ ಮಾನವೀಯತೆ ಮೆರೆದಿದ್ದಾರೆ. ಅವರ ಸೇವೆ ಸದಾ ಹೀಗೆಯೇ ಮುಂದುವರೆಯಲಿ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಆರ್. ಕೊಪ್ಪದ, ಪುರಸಭೆ ಸದಸ್ಯ ರಾಜೀವ ಕುಂಬಿ, ತಿಪ್ಪಣ್ಣ ಸಂಶಿ, ಶಿವಯೋಗಿ ಗಡ್ಡದ್ದೇವರಮಠ, ಮಹೇಶ ಲಮಾಣಿ, ಕೋಟೆಪ್ಪ ವರ್ದಿ, ವಿರೂಪಾಕ್ಷ ನಂದೆಣ್ಣವರ, ನೀಲಪ್ಪ ಶರಸೂರಿ, ಶಂಕ್ರಣ್ಣ ಶೀರನಹಳ್ಳಿ, ನಾಗರಾಜ ಮಡಿವಾಳರ, ಪರಮೇಶ ಲಮಾಣಿ, ಎಂ.ಎಂ. ಗದಗ, ಹೆಗ್ಗಪ್ಪ ಪೂಜಾರ, ಬಸಣ್ಣ ಗೂಳಣ್ಣವರ, ಹನಮಂತ ಕೋಣನತಂಬಗಿ, ಮಾರ್ತಾಂಡಪ್ಪ ಪೆದ್ದರ, ಶಹಾಜನ ಹವಾಲ್ದಾರ, ರಾಮಣ್ಣ ಅಡಗಿಮನಿ, ಸಿದ್ಧಲಿಂಗೇಶ ರಗಟಿ, ಜುಂಜಪ್ಪ ಮುದಿಯಮ್ಮನವರ, ಮಂಜಯ್ಯ ಶೀತಮ್ಮನವರ, ಶರಣಪ್ಪ ಇಚ್ಚಂಗಿ ಮುಂತಾದವರಿದ್ದರು.

## ನಾಗೇಂದ್ರಪ್ಪಗೆ ಗೌರವ ಡಾಕ್ಟರೇಟ್

**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಅಳವಂಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ, ಸಹಾಯಕ ಪ್ರಾಧ್ಯಾಪಕ ನಾಗೇಂದ್ರಪ್ಪ ಬಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಅಭಿವೃದ್ಧಿ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಹೆಚ್.ಡಿ. ಪ್ರಶಾಂತ್ ರವರ ಮಾರ್ಗದರ್ಶನದಲ್ಲಿ "ಸಾಮುದಾಯಿಕ ಸಾರ್ವಜನಿಕ ಸ್ವತ್ತು ಮತ್ತು ಅಭಿವೃದ್ಧಿ" ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಕನ್ನಡ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ.

ಇದೇ ಜನವರಿ 10 ರಂದು ನಡೆದ ಘಟಿಕೋತ್ಸವದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳು ನಾಗೇಂದ್ರಪ್ಪ ಅವರಿಗೆ ಪದವಿ ಪ್ರದಾನ ಮಾಡಿದ್ದಾರೆ.

ನಾಗೇಂದ್ರಪ್ಪ ಬಿ ಇವರ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.




### ಶ್ರೀರಾಮಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಖಾನಪ್ಪನವರ ಮಾಹಿತಿ

## ಜ. 15ರಿಂದ 22ರವರೆಗೆ ಶ್ರೀರಾಮೋತ್ಸವ




**■ವಿಜಯಸಾಕ್ಷಿ ಸುದ್ದಿ, ಗದಗ**

ಅಯೋಧ್ಯೆಯಲ್ಲಿ ಜ.22ರಂದು ಶ್ರೀರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅವಳಿ ನಗರದಲ್ಲಿ ಜ. 15ರಿಂದ 22ರವರೆಗೆ ಶ್ರೀರಾಮೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀರಾಮಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಖಾನಪ್ಪನವರ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಗರದ ಶಹಾಪುರಪೇಟೆ ಪಂಚಮೂರ್ತಿ ದೇವಸ್ಥಾನದ ಎದುರು ಕೀರ್ತನ ಕೇಸರಿ ಪಂ. ದಿಗಂಬರ್ ಶಾಸ್ತ್ರೀಗಳಿಂದ ನಾಮಕೀರ್ತನೆ ಹಮ್ಮಿಕೊಳ್ಳಲಾಗಿದೆ. ಸುಮಾರು ಎರಡು ಸಾವಿರ ಜನರಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಜ.22ರಂದು ನಗರದ ಜೋಡ ಮಾರುತಿ ದೇವಸ್ಥಾನದಿಂದ ಕೆ.ಸಿ ರಾಣಿ ರಸ್ತೆಯಲ್ಲಿರುವ ಶ್ರೀರಾಮ ಮಂದಿರದವರೆಗೆ ಭವ್ಯ ಮೆರವಣಿಗೆ ನಡೆಯಲಿದೆ. ಅಲ್ಲಿ 11 ಸಾವಿರ ದೀಪಗಳ ಕಾರ್ತಿಕೋತ್ಸವ ನಡೆಯಲಿದೆ. ಸುಮಾರು 20 ಸಾವಿರ ಜನ ಮೆರವಣಿಗೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ಸ್ವಯಂ ಪ್ರೇರಿತರಾಗಿ ಶ್ರೀರಾಮನ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಜ. 22ರಂದು ನಡೆಯುವ ಶ್ರೀರಾಮ ಪ್ರಾಣಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮದ್ಯದಂಗಡಿ ಮಾಲೀಕರು, ಮಾಂಸ ಮಾರಾಟ, ಪ್ರಾಣಿ ವಧೆಯನ್ನು ಸ್ವಯಂಪ್ರೇರಿತರಾಗಿ ಬಂದ್ ಮಾಡಿ, ಪ್ರಭು ಶ್ರೀರಾಮನ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು ಎಂದು ರಾಜು ಖಾನಪ್ಪನವರ ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀರಾಮ ಸೇನೆ ಮುಖಂಡರಾದ ಮಹೇಶ ರೋಖಡೆ, ಸೋಮು ಗುಡಿ, ಸಿದ್ದು ಜೀವನಗೌಡ್ರ, ಶಿವಯೋಗಿ ಹಿರೇಮಠ, ಶರಣು ಇಟಗಿ, ವೀರೇಂದ್ರ ಬಾಳಿಗೇರಿ, ಸತೀಶ ಕುಂಬಾರ, ಕಿರಣ ಹಿರೇಮಠ, ಹುಲಗಪ್ಪ ವಾಲ್ಮೀಕಿ, ಗಂಗಪ್ಪ ಬಿಜಾಪುರ, ಶರಣು ಲಕ್ಕುಂಡಿ, ಮಂಜುನಾಥ ಗುಡಿ, ಮಂಜುನಾಥ ಪೂಜಾರ ಇತರರು ಉಪಸ್ಥಿತರಿದ್ದರು.

## ಸಂಪಾದಕೀಯ

# ಬದಲಿಸಬೇಕಿದೆ ಮನಸ್ಸಿನ ನಿಯಮ

ಚಿತ್ರ ನಟ ಯಶ್ ಹುಟ್ಟಹಬ್ಬದ ನಿಮಿತ್ತ ಬೃಹತ್ ಕಟೌಟ್ ಅಳವಡಿಸುವಾಗ ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದ ಮೂವರು ಯುವಕರು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುವ ಘಟನೆ ರಾಜ್ಯಾದ್ಯಂತ ಸಂಚಲನ ಸೃಷ್ಟಿಸಿದೆ. ವಿಷಯ ತಿಳಿದು ನಟ ಯಶ್ ಸೂರಣಗಿ ಗ್ರಾಮಕ್ಕೆ ಭೇಟಿ ನೀಡಿ, ಅಭಿಮಾನಿಗಳ ಕುಟುಂಬದ ಸದಸ್ಯರಿಗೆ ಸಾಂತ್ವನ ನೀಡಿದ್ದಾರೆ.

ರಾಜ್ಯ ಸರಕಾರವೂ ಮೃತರ ಕುಟುಂಬಕ್ಕೆ 2 ಲಕ್ಷ ರೂ. ಸಹಾಯ ನೀಡಿದೆ. ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರು ಖುದ್ದಾಗಿ, ಮೃತ ಯುವಕರ ಮನೆಗಳಿಗೆ ಭೇಟಿ ನೀಡಿ ಪರಿಹಾರದ ಚೆಕ್ ವಿತರಣೆ ಮಾಡಿ, ಧೈರ್ಯ ತುಂಬುವ ಕೆಲಸ ಮಾಡಿದ್ದಾರೆ. ಈ ವೇಳೆ ಸಚಿವರು, ಬ್ಯಾನರ್, ಕಟೌಟ್ ಅಳತೆಯನ್ನು ನಿಗದಿಗೊಳಿಸುವ ಕುರಿತಂತೆ ನಿಯಮ ರೂಪಿಸಿ, ಭವಿಷ್ಯದಲ್ಲಿ ಈ ರೀತಿಯ ಘಟನೆಗಳು ಆಗದಂತೆ ಎಚ್ಚರಿಕೆ ವಹಿಸಲು ಕ್ರಮ ಕೈಗೊಳ್ಳುವ ಭರವಸೆಯನ್ನೂ ನೀಡಿದ್ದಾರೆ. ಆದರೆ ಅಸಲಿಗೆ ಬದಲಾಗಬೇಕಿರುವುದು ಬ್ಯಾನರ್ ಅಳವಡಿಕೆಯ ನಿಯಮವಲ್ಲ, ಯುವಕರ ಮನಸ್ಥಿತಿ. ಮನೆಗೆ ಬೆಳಕಾಗಬೇಕಿದ್ದ 20 ರಿಂದ 23 ವರ್ಷದ ಮೂವರು ಯುವಕರು, ತಮ್ಮ ನೆಚ್ಚಿನ ಚಿತ್ರನಟನೊಬ್ಬನ ಬೃಹತ್ ಬ್ಯಾನರ್ ಅಳವಡಿಸುವಾಗ ಅಪಾಯದ ಸಣ್ಣ ಎಚ್ಚರಿಕೆ ವಹಿಸದೆ ಇರುವುದು ಅವರ ಮನಸ್ಥಿತಿ ಎಂಥದ್ದು ಎನ್ನುವುದು ಅರ್ಥವಾಗುತ್ತದೆ. ಚಿತ್ರನಟನ ಬಗ್ಗೆ ಅಭಿಮಾನ ಇರಬೇಕು. ಆದರೆ ಅಂಥ ಅಭಿಮಾನ ಇದ್ದ ಕಾರಣಕ್ಕೆ ಅಷ್ಟೊಂದು ಬೃಹತ್ ಪ್ರಮಾಣದ ಕಟೌಟ್ ನಿಲ್ಲಿಸಲು ಪ್ರಯತ್ನಿಸಿ, ಪ್ರಾಣ ಕಳೆದುಕೊಂಡರು.

ಚಿತ್ರನಟನ ಬಗ್ಗೆ ಅಭಿಮಾನ ಇರಬೇಕು. ಅಭಿಮಾನವನ್ನು ಕಟೌಟ್ ಮೂಲಕವೇ ವ್ಯಕ್ತಪಡಿಸಬೇಕು ಎನ್ನುವುದು ಎಷ್ಟು ಸರಿ? ಚಿತ್ರನಟನ ಆದರ್ಶಗಳನ್ನು, ಸೇವಾ ಗುಣವನ್ನು ಸ್ಮರಿಸಿ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಬಹುದಿತ್ತು. ಏನೂ ಆಗದೇ ಇದ್ದರೆ ತಮ್ಮದೇ ಕೇರಿಯ, ಓಣಿಯ ಮಕ್ಕಳಿಗೆ ಪುಸ್ತಕ, ಪೆನ್ನು ವಿತರಿಸಿ ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಜನ್ಮದಿನಕ್ಕೆ ಅರ್ಥ ಕಲ್ಪಿಸಬಹುದಿತ್ತು. ಏನೂ ಆಗದಿದ್ದರೂ ಒಂದು ಕೇಕ್ ಕತ್ತರಿಸಿ, ಸ್ನೇಹಿತರೊಂದಿಗೆ ಹಂಚಿ ಸಂಭ್ರಮಿಸಬಹುದಿತ್ತು. ನೇತ್ರದಾನ, ದೇಹದಾನ, ರಕ್ತದಾನ ಕಾರ್ಯಕ್ರಮ ಮಾಡಬಹುದಿತ್ತು.

ಇದೆಲ್ಲವನ್ನು ಬಿಟ್ಟು ಬೃಹತ್ ಕಟೌಟ್ ಅಳವಡಿಕೆಗೆ ಮುಂದಾಗಿದ್ದು ಒಪ್ಪುವಂಥದ್ದಲ್ಲ. ಯುವಕರು ಯಾವ ರೀತಿ ಅಭಿಮಾನ ವ್ಯಕ್ತಪಡಿಸಿದರೆ ಅದು ಜನೋಪಯೋಗಿ ಆಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಬ್ಯಾನರ್ ಅಳವಡಿಕೆಗೆ ಅಳತೆಯ ನಿಯಮ ರೂಪಿಸುವ ಬದಲು, ಯುವಕರು, ಮಕ್ಕಳು ಸಂಭ್ರಮಾಚರಣೆ, ಅಭಿಮಾನ ವ್ಯಕ್ತಪಡಿಸುವ ರೀತಿ ನೀತಿಗಳ ಬಗ್ಗೆ ಅಳತೆ– ನಿಯಮ ರೂಪಿಸಿಕೊಳ್ಳಬೇಕು.

ಬ್ಯಾನರ್ ಅಳವಡಿಕೆ ಸಂಪೂರ್ಣ ತಪ್ಪು, ಅಭಿಮಾನ ವ್ಯಕ್ತಪಡಿಸಿದ್ದೆ ತಪ್ಪು ಎನ್ನುವುದು ಪತ್ರಿಕೆ ಅಭಿಪ್ರಾಯ ಅಲ್ಲ. ಆದರೆ ಅದನ್ನು ವ್ಯಕ್ತಪಡಿಸಲು ಯುವಕರು ಆಯ್ಕೆ ಮಾಡಿಕೊಂಡಿದ್ದ ರೀತಿ ಮಾತ್ರ ಆಕ್ಷೇಪಾರ್ಹ. ಅದು ಕುಟುಂಬದ ಸದಸ್ಯರ ಸಂಭ್ರಮವೇ ಇರಲಿ, ನೆಚ್ಚಿನ ನಟನ ಕುರಿತಾದ ಅಭಿಮಾನವೇ ಇರಲಿ. ಇಂಥ ಹುಚ್ಚು ಸಂಭ್ರಮದ ಪರಿಣಾಮ ಆ ಯುವಕರ ಕುಟುಂಬ ಎದುರಿಸಬೇಕಾಗಿದೆ. ಸರಕಾರ ಎಷ್ಟೇ ಪರಿಹಾರ ಕೊಟ್ಟರೂ ಜೀವ ಮರಳಿಸಲು ಸಾಧ್ಯವಿಲ್ಲ ಎನ್ನುವುದನ್ನು ಯುವಕರು ಅರ್ಥ ಮಾಡಿಕೊಳ್ಳಬೇಕು.

## ಮಕರ ಸಂಕ್ರಾಂತಿಯ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

# ಸಂಕ್ರಾಂತಿ ಹಬ್ಬದ ಮಹತ್ವ ಅರಿಯಿರಿ

ಮಕರ ಸಂಕ್ರಾಂತಿಯ ದಿನದಂದು ಪಂಚಾಂಗದ ನಿರಯನ ಪದ್ಧತಿಗನುಸಾರ ಸೂರ್ಯನ ಉತ್ತರಾಯಣ ಪ್ರಾರಂಭವಾಗುತ್ತದೆ. ಮಕರ ಸಂಕ್ರಾಂತಿ ಹಬ್ಬವು ತಿಥಿವಾಚಕವಾಗಿರದೇ ಅಯನ–ವಾಚಕವಾಗಿದೆ. ಈ ದಿನ ಸೂರ್ಯನ ನಿರಯನ ಮಕರ ರಾಶಿಯಲ್ಲಿ ಸಂಕ್ರಮಣವಾಗುತ್ತದೆ. ಇದರೊಂದಿಗೆ ಸಂಕ್ರಾಂತಿಯನ್ನು ದೇವತೆ ಎಂದು ನಂಬಲಾಗಿದೆ. ಸಂಕ್ರಾಂತಿಯು ಸಂಕರಾಸುರನೆಂಬ ದೈತ್ಯನನ್ನು ವಧಿಸಿದ್ದಳು ಎಂಬ ಕಥೆಯೂ ಇದೆ.

ಸೂರ್ಯನ ಭ್ರಮಣದಿಂದಾಗುವ ಕಾಲ ವ್ಯತ್ಯಾಸವನ್ನು ಸರಿಪಡಿಸಲು ಪ್ರತಿ 80 ವರ್ಷಕ್ಕೊಮ್ಮೆ ಸಂಕ್ರಾಂತಿಯನ್ನು ಒಂದು ದಿನ ಮುಂದೂಡಲಾಗುತ್ತದೆ. 2024ರಲ್ಲಿ ಮಕರ ಸಂಕ್ರಾಂತಿಯು 15 ಜನವರಿ, ಸೋಮವಾರದಂದು ಆಚರಿಸಲಾಗುವುದು. ಸಂಕ್ರಾಂತಿಯಂದು ಒಬ್ಬರಿಗೊಬ್ಬರು ಎಳ್ಳು–ಬೆಲ್ಲ (ಎಳ್ಳು ಬೆಲ್ಲದ ಜೊತೆ ಕಬ್ಬು, ಕೊಬ್ಬರಿ, ಕಡಲೆಬೀಜ, ಹುರಿಗಡಲೆ ಕೂಡ) ಹಂಚುತ್ತಾರೆ. ಇದು ಪ್ರೀತಿ ಮತ್ತು ಸೌಹಾರ್ದತೆ ಹೆಚ್ಚಿಸುವ ಹಬ್ಬವಾಗಿದೆ.

ಕರ್ಕ ಸಂಕ್ರಾಂತಿಯಿಂದ ಮಕರ ಸಂಕ್ರಾಂತಿಯವರೆಗಿನ ಕಾಲವನ್ನು 'ದಕ್ಷಿಣಾಯನ' ಎನ್ನುತ್ತಾರೆ. ದಕ್ಷಿಣಾಯನ ಕಾಲದಲ್ಲಿ ಮೃತನಾದ ವ್ಯಕ್ತಿಯು, ಉತ್ತರಾಯಣದಲ್ಲಿ ಮೃತನಾದ ವ್ಯಕ್ತಿಗಿಂತ ದಕ್ಷಿಣಲೋಕಕ್ಕೆ (ಯಮಲೋಕಕ್ಕೆ) ಹೋಗುವ ಸಾಧ್ಯತೆ ಹೆಚ್ಚಿರುತ್ತದೆ.



ಸಾಧನೆಯ ದೃಷ್ಟಿಯಿಂದ ಮಕರ ಸಂಕ್ರಾಂತಿಯ ಮಹತ್ವ: ಈ ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ವಾತಾವರಣವು ಅಧಿಕ ಚೈತನ್ಯಮಯವಾಗಿರುವುದರಿಂದ ಸಾಧನೆಯನ್ನು ಮಾಡುವವರಿಗೆ ಈ ಸಮಯ ಚೈತನ್ಯದ ಲಾಭವಾಗುತ್ತದೆ. ಮಕರ ಸಂಕ್ರಾಂತಿಯಿಂದ ರಥ ಸಪ್ತಮಿಯವರೆಗಿನ ಕಾಲವು ಪರ್ವಕಾಲವಾಗಿರುತ್ತದೆ. ಈ ಪರ್ವಕಾಲದಲ್ಲಿ ಮಾಡಿದ ದಾನ ಮತ್ತು ಪುಣ್ಯಕರ್ಮಗಳು ವಿಶೇಷ ಫಲವನ್ನು ಕೊಡುತ್ತವೆ.

ಬಾಗಿನ ನೀಡುವುದು: ಬಾಗಿನ ನೀಡುವುದೆಂದರೆ ಇನ್ನೊಂದು ಜೀವದಲ್ಲಿರುವ ದೇವತ್ವಕ್ಕೆ ತನು, ಮನ ಮತ್ತು ಧನದಿಂದ ಶರಣಾಗುವುದು. ಸಂಕ್ರಾಂತಿಯ ಕಾಲವು ಸಾಧನೆಗೆ ಪೂರಕವಾಗಿರುವುದರಿಂದ ಈ ಕಾಲದಲ್ಲಿ ನೀಡಿದ ಬಾಗಿನದಿಂದ ದೇವತೆಯ ಕೃಪೆಯಾಗಿ ಜೀವಕ್ಕೆ ಇಚ್ಛಿತ ಫಲ ಪ್ರಾಪ್ತಿಯಾಗುತ್ತದೆ.

ತೀರ್ಥಸ್ನಾನವನ್ನು ಮಾಡುವುದು: ಮಕರಸಂಕ್ರಾಂತಿಯ ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಕಾಲವು ಪುಣ್ಯಕಾಲವಾಗಿರುತ್ತದೆ. ಈ ಕಾಲದಲ್ಲಿ ತೀರ್ಥಸ್ನಾನಕ್ಕೆ ವಿಶೇಷ ಮಹತ್ವವಿದೆ. ಗಂಗಾ, ಯಮುನಾ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ದಡದಲ್ಲಿರುವ ಕ್ಷೇತ್ರದಲ್ಲಿ ಸ್ನಾನ ಮಾಡಿದರೆ ಮಹಾಪುಣ್ಯವು ಲಭಿಸುತ್ತದೆ.

ಎಳ್ಳು ಮತ್ತು ಸಂಕ್ರಾಂತಿಯ ಸಂಬಂಧ: ಸಂಕ್ರಾಂತಿಯಲ್ಲಿ ಎಳ್ಳನ್ನು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಎಳ್ಳು ಸತ್ವ ಲಹರಿಗಳನ್ನು ಗ್ರಹಿಸಿ ಪ್ರಕ್ಷೇಪಿಸುತ್ತದೆ. ಎಳ್ಳು ಸೇವಿಸುವುದರಿಂದ ಆಂತರಿಕ ಶುದ್ಧಿಯಾಗುತ್ತದೆ. ಎಳ್ಳು–ಬೆಲ್ಲವನ್ನು ದೇವರಿಗೆ ನೈವೇದ್ಯವೆಂದು ಅರ್ಪಿಸಿ ಇತರರಿಗೆ ಹಂಚುವುದರಿಂದ ಅವರಲ್ಲಿಯೂ ಪ್ರೇಮಭಾವ ಮತ್ತು ಸಕಾರಾತ್ಮಕತೆ ಹೆಚ್ಚುತ್ತದೆ.

**ಸಂಗ್ರಹ: ವಿನೋದ ಕಾಮತ್,**
ರಾಜ್ಯ ವಕ್ತಾರರು, ಸನಾತನ ಸಂಸ್ಥೆ.

# ಅಯೋಧ್ಯಾ ಆಮಂತ್ರಣ ವಿತರಣೆಗೆ ಚಾಲನೆ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಪಟ್ಟಣದಾದ್ಯಂತ ಸಂಘ ಪರಿವಾರದ ಮುಖಂಡರಿಂದ ಅಯೋಧ್ಯೆಯಲ್ಲಿ ಶ್ರೀರಾಮ ಪ್ರತಿಷ್ಠಾಪನೆ ನಿಮಿತ್ತ ಮಂತ್ರಾಕ್ಷತೆ ವಿತರಣೆಗೆ ವರವಿ ಮೌನೇಶ್ವರ ಸ್ವಾಮೀಜಿ, ಹಾಗೂ ಹುಲ್ಲೂರಿನ ಅಮೋಘಿಸಿದ್ದೇಶ್ವರ ಸ್ವಾಮೀಜಿಶನಿವಾರ ಸಾಂಕೇತಿಕವಾಗಿ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಮಂತ್ರಾಕ್ಷತೆ ಅಭಿಯಾನದ ಪ್ರಮುಖ ವೀರಣ್ಣ ಮಜ್ಜಗಿ ಹಾಗೂ ಕರಸೇವಕ ರಾಮಣ್ಣ ಕಂಬಳಿ, ಅಯೋಧ್ಯೆಯಲ್ಲಿ ಶ್ರೀರಾಮನ ಪ್ರತಿಷ್ಠಾಪನೆಗೆ ಕ್ಷಣಗಣನೆ ಆರಂಭವಾಗಿದ್ದು ಎಲ್ಲರಲ್ಲೂ ಸಂತಸ ಮೂಡಿಸಿದೆ.

ಪರಿವಾರದ ನಿರ್ದೇಶನದಂತೆ ಮನೆ ಮನೆಗೂ ತೆರಳಿ ಮಂತ್ರಾಕ್ಷತೆ ತಲುಪಿಸಲಾಗುತ್ತಿದೆ. ದೀಪಾವಳಿ ಹಬ್ಬದ ರೀತಿಯಲ್ಲಿ ಎಲ್ಲರೂ ಶ್ರೀರಾಮನ ಪ್ರತಿಷ್ಠಾಪನೆಯ ದಿವಸ ತಮ್ಮ ತಮ್ಮ ಮನೆಗಳನ್ನು ಹಾಗೂ ಪ್ರತಿ ದೇವಸ್ಥಾನವನ್ನು ಸಹ ಸ್ವಚ್ಛಗೊಳಿಸಿ, ದೀಪ ಬೆಳಗುವ ಮೂಲಕ ಶ್ರೀರಾಮನ ಕೃಪೆಗೆ ಪಾತ್ರರಾಗಬೇಕೆಂದು ತಿಳಿಸಿದರು.

ಪರಶುರಾಮ ಡೊಂಕಬಳ್ಳಿ, ಪರಶುರಾಮ್ ಲೋಹಾರ, ನಾಗರಾಜ್ ತಳವಾರ, ನಿಂಗಪ್ಪ ಕರಿಗಾರ, ಫಕ್ಕೀರೇಶ ಡಂಬಳ, ಮಹೇಶ ಕರಿಭರಮಗೌಡ್ರ, ನಿಂಗಪ್ಪ ತೇಲಿ, ಅಶೋಕ ಕಲಾಲ ಮುಂತಾದವರು ಉಪಸ್ಥಿತರಿದ್ದರು.

# ಹೂವಿನಶಿಗ್ಗಿ ಮಠದಲ್ಲಿ ಸಂಕ್ರಾಂತಿ ಸಂಭ್ರಮ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಾಡಿನ ಐತಿಹಾಸಿಕ ಪರಂಪರೆಯಲ್ಲಿ ಸಾಧುಗಳು, ಸಂತರು, ಶರಣರು, ಋಷಿಮುನಿಗಳು, ಮಠಾಧೀಶರು ತಮ್ಮ ತಪಃಶಕ್ತಿ, ಸಂಕಲ್ಪ, ಜ್ಞಾನ, ಅನುಭಾವಗಳಿಂದ ಸಮಾಜಸೇವೆ, ತ್ರಿವಿಧ ದಾಸೋಹದ ಮೂಲಕ ಲೋಕ ಕಲ್ಯಾಣಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ. ಇದಕ್ಕೆ ಲಕ್ಷ್ಮೇಶ್ವರ ಸಮೀಪದ ಹೂವಿನಶಿಗ್ಗಿ ವಿರಕ್ತಮಠ ಸಾಕ್ಷಿಯಾಗಿದೆ.

ಲಿಂ. ನಿರಂಜನ ಮಹಾಸ್ವಾಮಿಗಳು ಬಸವನಾಡು ಬೀದರ ಜಿಲ್ಲೆ ಔರಾದ್ ತಾಲೂಕಿನ ಸೋನಾಳ ಗ್ರಾಮದಿಂದ 1996ರಲ್ಲಿ ಮುಕ್ತಿಮಂದಿರ ಧರ್ಮಕ್ಷೇತ್ರಕ್ಕೆ ಆಗಮಿಸಿದ್ದರು. ಈ ವೇಳೆ ಅವರಿಗೆ ಸ್ವಪ್ನವೊಂದು ಬಿದ್ದು ಹೂವಿನ ಶಿಗ್ಲಿಯಲ್ಲಿನ ಪಾಳು ಬಿದ್ದಿರುವ ಮಠವನ್ನು ಉದ್ಧರಿಸು ಎಂಬ ವಾಣಿಯನ್ವಯ ಕಲ್ಲು ಮುಳ್ಳುಗಳಿಂದ ಕೂಡಿದ, ಶಿಥಿಲಾವಸ್ಥೆಯ ಚಿಕ್ಕ ಗುಡಿಯಲ್ಲಿ ನೆಲೆನಿಂತ ಶ್ರೀಗಳು ತಮ್ಮ ಸಂಕಲ್ಪ ಶಕ್ತಿಯಿಂದ ಈ ಸ್ಥಳವನ್ನು ಜೀರ್ಣೋದ್ಧಾರಗೊಳಿಸಿದರು. ನಿತ್ಯ ಧರ್ಮ, ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ಪೂಜೆ, ಬಸವತತ್ವ ಪ್ರಚಾರ, ಯೋಗ, ಆಯುರ್ವೇದ ಶಾಸ್ತ್ರಗಳ ಮೂಲಕ ಕ್ಷೇತ್ರವನ್ನು ಬೆಳೆಸಿದರು. ಆಯುರ್ವೇದ ಔಷಧಿ ಸಿದ್ಧಪಡಿಸಿ ಮಾರಕ ರೋಗಗಳಿಗೆ ದಿವ್ಯೌಷಧಿ ನೀಡಿ ರೋಗಿಗಳ ಪಾಲಿಗೆ ಸಂಜೀವಿನಿಯಾಗಿದ್ದರು.



ತುಮಕೂರಿನ ಸಿದ್ಧಗಂಗಾಮಠದ ಶಿವಕುಮಾರ ಸ್ವಾಮಿಗಳ ನೆಚ್ಚಿನ ಶಿಷ್ಯರಾಗಿದ್ದ ಲಿಂ. ನಿರಂಜನ ಶ್ರೀಗಳು ಅವರಂತೆಯೇ ಗ್ರಾಮೀಣ ಪ್ರದೇಶಗಳ ಬಡ, ಅನಾಥ ಮಕ್ಕಳಿಗೆ ತ್ರಿವಿಧ ದಾಸೋಹ ಸೇವೆಯ ಮೂಲಕ ಗುರುಕುಲ ಶಿಕ್ಷಣ ಆರಂಭಿಸಿ ಬಡ ಮಕ್ಕಳ ಆಶಾಕಿರಣವೇ ಆಗಿದ್ದರು. ಹೂವಿನ ಶಿಗ್ಗಿ ಅಷ್ಟೇ ಅಲ್ಲದೆ ಹುಟ್ಟೂರು ಸೋನಾಳ, ಆಂಧ್ರದ ನಾಗನೂರ, ಶಿರಹಟ್ಟಿ ತಾಲೂಕಿನ ಕೊಂಚಿಗೇರಿ, ಹಾವೇರಿ ತಾಲೂಕಿನ ಸೋಮನಕಟ್ಟಿಯಲ್ಲಿ ಶಾಖಾಮಠ ಸ್ಥಾಪಿಸಿ ಜನಸೇವೆಯ ಮೂಲಕ ಹೆಸರಾದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಪ್ರತಿವರ್ಷ ಸಂಕ್ರಾಂತಿಗೆ ನಾಡಿನ ಹರಗುರುಚರ ಮೂರ್ತಿಗಳ ಸಮ್ಮುಖದಲ್ಲಿ ಕ್ಷೇತ್ರದಲ್ಲಿ ಜಾತ್ರಾಮಹೋತ್ಸವ ನಿಮಿತ್ತ ವಿವಿಧ ಸಾಮಾಜಿಕ, ಧಾರ್ಮಿಕ, ಸಾಂಪ್ರದಾಯಿಕ ಹಬ್ಬಗಳನ್ನು ಆಚರಿಸುತ್ತಿದ್ದರು.

ನಿರಂಜನ ಮಹಾಸ್ವಾಮಿಗಳು 2011ರಲ್ಲಿ ಲಿಂಗೈಕ್ಯರಾದ ಬಳಿಕ ಶ್ರೀಮಠದ ಸಂಪೂರ್ಣ ಜವಾಬ್ದಾರಿ ಹೊತ್ತ ಹಾವೇರಿ ತಾಲೂಕಿನ ಮರೋಳ ಗ್ರಾಮದ ಚನ್ನವೀರ ಶ್ರೀಗಳು ಶ್ರೀಮಠ ಮತ್ತು ಗುರುಕುಲವನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈಗ ಗುರುಕುಲದಲ್ಲಿ ಬಡ, ಅನಾಥರು ಸೇರಿ 400ಕ್ಕೂ ಹೆಚ್ಚು ಮಕ್ಕಳು ಓದುತ್ತಿದ್ದು, ಅವರಿಗೆ ಶಿಕ್ಷಣದೊಂದಿಗೆ ಧರ್ಮ, ಸಂಸ್ಕೃತಿ, ಸಂಸ್ಕಾರ ಮತ್ತು ವೇದಾಧ್ಯಯನ ನೀಡಿ ಲಿಂ.ಶ್ರೀಗಳ ಮಾರ್ಗದಲ್ಲಿ ಮಠವನ್ನು ವಿಶಿಷ್ಟ ಜಾಗೃತ ಕೇಂದ್ರವನ್ನಾಗಿಸುವತ್ತ ಸಾಗಿದ್ದಾರೆ. ಸರ್ಕಾರದ ಅನುದಾನವಿಲ್ಲದೇ ನಿತ್ಯ ನೂರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹ, ಶಿಕ್ಷಣ ದಾಸೋಹ ಸಾಂಗವಾಗಿ ಸಾಗುವಲ್ಲಿ ಶ್ರೀಗಳ ಆಣತಿಯಂತೆ ನಡೆದು ಸಹಾಯ–ಸಹಕಾರ ನೀಡುತ್ತಾ ಬಂದಿರುವ ಗ್ರಾಮಸ್ಥರ ಮತ್ತು ಭಕ್ತರ ಸೇವಾ ಕಾರ್ಯವೂ ಅಷ್ಟೇ ಪ್ರಸಂಶನೀಯ.

ಈ ವರ್ಷ ಜ.13ರಿಂದ 15ರವರೆಗೆ ನಾಡಿನ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಅನ್ನದಾಸೋಹ, ಜ್ಞಾನ ದಾಸೋಹದ ಜಾತ್ರಾ ಮಹೋತ್ಸವ ಮತ್ತು ಲಿಂ.ಶ್ರೀಗಳ ಪುಣ್ಯಸ್ಮರಣೋತ್ಸವ ಆಚರಿಸಲಾಗುತ್ತದೆ. 'ಖಡಕ್ ರೊಟ್ಟಿ ಮತ್ತು ಕರಿಂಡಿ' ಪ್ರಸಾದವೇ ಈ ಜಾತ್ರೆಯ ವೈಶಿಷ್ಟ್ಯ. ಜಾತ್ರೆಗೆ ಹೂವಿನ ಶಿಗ್ಗಿ ಸೇರಿ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಶ್ರೀಮಠಕ್ಕೆ ರೊಟ್ಟಿ ಸೇರಿ ಇತರೇ ಆಹಾರ ಧಾನ್ಯಗಳನ್ನು ಸಮರ್ಪಿಸುತ್ತಾರೆ.

# ಜಲಾಶಂಕರ ತೀರ್ಥಕ್ಷೇತ್ರದಲ್ಲಿ ಸಂಕ್ರಾಂತಿ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**




ತಾಲೂಕಿನ ನಾಗಾವಿ ತಾಂಡಾ ಗುಡ್ಡಕ್ಕೆ ಹೊಂದಿಕೊಂಡಿರುವ ಶ್ರೀ ಜಲಾಶಂಕರ ತೀರ್ಥಕ್ಷೇತ್ರದಲ್ಲಿ ಜ.15ರಂದು ಬೆಳಿಗ್ಗೆ 6.30ಕ್ಕೆ ವೇ.ಮೂ. ಬಸಯ್ಯಸ್ವಾಮಿ ಈರಯ್ಯ ಹಿರೇಮಠ ಇವರಿಂದ ಶ್ರೀ ಜಲಾಶಂಕರನಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಮಧ್ಯಾಹ್ನ 11 ಗಂಟೆಗೆ ಧಾರ್ಮಿಕ ಸಭೆ ಹಾಗೂ ಮಹಾಪ್ರಸಾದ ಜರುಗುವುದು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮಾತೋಶ್ರೀ ರುದ್ರಮ್ಮತಾಯಿ ಈರಮ್ಮತಾಯಿ ಆಶ್ರಮ ಸಂಭಾಪೂರ, ಪರಮಪೂಜ್ಯ ವಿಷ್ಣುಸ್ವಾಮೀಜಿ, ಶಂಭುಲಿಂಗ ಗೋಳಿಮಹಾರಾಜ ತಂಗಡಿ ವಹಿಸುವರು.

ಪ್ರತಿ ವರ್ಷದಂತೆ ಶ್ರೀ ಜಲಾಶಂಕರ ತೀಥಕ್ಷೇತ್ರಕ್ಕೆ ಬಸ್ಸಿನ ವ್ಯವಸ್ಥೆ ಇರುತ್ತದೆ. ಈ ಕಾರ್ಯಕ್ರಮದಲ್ಲಿ ಸಕಲ ಸದ್ಭಕ್ತರು ತನು, ಮನ, ಧನದಿಂದ ಸೇವೆ ಸಲ್ಲಿಸಿ ಶ್ರೀಜಲಾಶಂಕರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಜಲಾಶಂಕರ ತೀರ್ಥ ಕ್ಷೇತ್ರ ಟ್ರಸ್ಟ್ ಕಮಿಟಿಯ ಅಧ್ಯಕ್ಷ ಗಣೇಶ ಪಾಂಡಪ್ಪ ಲಮಾಣಿ, ಸರ್ವ ಸದಸ್ಯರು ಹಾಗೂ ಅರ್ಚಕರಾದ ವೇ.ಮೂ. ಮಲ್ಲಯ್ಯಸ್ವಾಮಿ ಅಂಗಡಿ (ಹಿರೇಮಠ) ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

# ಸಣ್ಣ ತಾಂಡೆ ಶಾಲೆಯಲ್ಲಿ ವಿವೇಕಾನಂದ ಜಯಂತಿ ಆಚರಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಸಮೀಪದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಣ್ಣ ತಾಂಡೆ ಅಡವಿಸೋಮಾಪೂರದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ಮಲ್ಲೇಶ ಡಿ.ಎಚ್. ಸ್ವಾಮಿ ವಿವೇಕಾನಂದರ ಜೀವನ ಸಂದೇಶ ಕುರಿತು ಮಾತನಾಡಿದರು.

ಶಾಲೆಯ ಶಿಕ್ಷಕರಾದ ಎಸ್.ಜಿ. ಅಮ್ಮಿನಭಾವಿ, ಎಸ್.ಟಿ. ಹಳಕಟ್ಟಿ, ಪಿ.ಬಿ. ಕಿಲಬನವರ, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಮಾರುತಿ ಪವಾರ, ಬಿಸಿಯೂಟ ಸಿಬ್ಬಂದಿಗಳಾದ ಗಂಗವ್ವ ಲಮಾಣಿ, ಸಾವಿತ್ರಿ ರಾಠೋಡ, ದೇವಕ್ಕ ಲಮಾಣಿ, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ–ಬೆಟಗೇರಿ ನಗರಸಭೆ ಎದುರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಮೂರ್ತಿಯ ಪರಿಸರದಲ್ಲಿ ನಾಮಫಲಕ ಸೇರಿದಂತೆ ಶಿಥಿಲಗೊಂಡಿರುವ ಆವರಣವನ್ನು ನಗರಸಭೆಯ ವಾರ್ಡ್ ನಂ. 13ರ ಸದಸ್ಯ ಮುತ್ತು ಮುಶಿಗೇರಿ ನೇತೃತ್ವದಲ್ಲಿ ವಾರ್ಡಿನ ಹಿರಿಯರು, ಯುವಕರು, ಹಾಗೂ ಸಂಗೊಳ್ಳಿರಾಯಣ್ಣನ ಅಭಿಮಾನಿಗಳ ಒತ್ತಾಯದ ಮೇರೆಗೆ ನವೀಕರಣಗೊಳಿಸಲಾಯಿತು.

# ಕೆಎಸ್‌ಎಸ್ ಪ್ರೌಢಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಕಾರ್ಯಾಗಾರ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪಟ್ಟಣದ ಕೆಎಸ್‌ಎಸ್ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ ಗಜೇಂದ್ರಗಡ ತಾಲೂಕಾ ಘಟಕ ಹಾಗೂ ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ಇವರ ಸಂಯುಕ್ತ ಆಶ್ರಯದಲ್ಲಿ ಕ್ಲಸ್ಟರ್ ಮಟ್ಟದ, ಎಸ್‌ಎಸ್‌ಎಲ್‌ಸಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಇಂಗ್ಲಿಷ್, ವಿಜ್ಞಾನ ಮತ್ತು ಗಣಿತ ವಿಷಯಗಳ ಕಾರ್ಯಾಗಾರ ನಡೆಯಿತು.

ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್. ಹುರಳಿಯವರು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಕುರಿತು ಮಾರ್ಗದರ್ಶನ ನೀಡಿದರು. ರೋಣ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಬಸವರಾಜ ಅಂಗಡಿ, ರೋಣ ಶಿಕ್ಷಣ ಸಂಯೋಜಕ ಮಹಾಂತೇಶ ಎ. ಚುಳುಕಿ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಇಸ್ಮಾಯಿಲ್ ಆರಿ, ಪ್ರಕಾಶ ಮಾಳಿ, ಡಿ.ಎಸ್. ಬಡಿಗೇರ, ಎಸ್.ವಿ. ಹಳ್ಳಿಕೇರಿ. ಎಮ್.ವಿ. ಜಾಧವ, ಎಸ್.ಎಂ. ಹಳ್ಳದ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಬಹಳ ಸರಳವಾದ ಶೈಲಿಯಲ್ಲಿ ಬೋಧಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಗಜೇಂದ್ರಗಡ ತಾಲೂಕಾ ಘಟಕದ ಅಧ್ಯಕ್ಷ ಬಿ.ಡಿ. ಯರಗೊಪ್ಪ, ಕಾರ್ಯದರ್ಶಿ ಪಿ.ಎನ್. ಹಿರೇಮಠ. ಕೋಶಾಧ್ಯಕ್ಷ ಎಮ್.ವಿ. ಬಿಂಗಿ, ಸಹ ಕಾರ್ಯದರ್ಶಿ ಎಮ್.ಎಚ್. ಸಿದ್ದಿ ಸೇರಿದಂತೆ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ನಿರ್ದೇಶಕ ಎಸ್.ಎಮ್. ಉಣಕಲ್ ಸ್ವಾಗತಿಸಿ, ವಂದಿಸಿದರು.

# ದೇಶದ ಬಗ್ಗೆ ಅಭಿಮಾನ ಹೊಂದಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಭಾರತದ ಸಂಸ್ಕೃತಿ, ಸಂಪ್ರದಾಯ, ಮೌಲ್ಯ–ಚಿಂತನೆಗಳ ಬಗೆಗೆ ಭಾರತವಷ್ಟೇ ಅಲ್ಲದೇ ವಿಶ್ವಕ್ಕೆ ಸದಭಿಪ್ರಾಯ, ಗೌರವ, ಅಭಿಮಾನ ಹಾಗೂ ಆಸಕ್ತಿ ಹೊಂದುವಂತೆ ಮಾಡಿದ ಶ್ರೇಯಸ್ಸು ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ವಾಗ್ಮಿ, ಶಿಕ್ಷಕ ಕಿರಣ ರಾಮ್ ಹೇಳಿದರು.



ಅವರು ಶುಕ್ರವಾರ ಪಟ್ಟಣದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕ ಮತ್ತು ಉನ್ನತ ಭಾರತ ಅಭಿಯಾನದಡಿಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಚಾರ್ಯ ಡಾ. ಪರಶುರಾಮ ಮಾತನಾಡಿ, ವಿವೇಕಾನಂದರ ಮಹೋನ್ನತ ಚಿಂತನೆ, ವಿಚಾರಧಾರೆ, ಶಿಸ್ತು, ಆದರ್ಶ, ತತ್ವ–ಚಿಂತನೆಗಳನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲರೂ ನಮ್ಮ ದೇಶದ ಬಗ್ಗೆ ಅಭಿಮಾನ, ಸ್ವಾಭಿಮಾನ ಹೊಂದಬೇಕು ಎಂದರು.

ಡಾ. ಎನ್.ಹಯವದನ, ಪ್ರೊ. ಡಾ.ರಾಜಶೇಖರ ಕೆ., ಪ್ರೊ. ಸೋಮಶೇಖರ ಕೆರಿಮನಿ, ಡಾ. ಆರ್.ಎಂ. ಪಾಟೀಲ, ಡಾ. ಸುಭಾಸ ಮೇಟಿ, ಪ್ರೊ. ಎಸ್.ಫ್. ಕೊಡ್ಲಿ, ಪ್ರೊ. ಎಸ್.ಎನ್. ಗೋಂದಕರ, ಪ್ರೊ. ದಯಾನಂದ ಬಡಿಗಣ್ಣವರ, ಪ್ರೊ. ಮಹೇಶ ಪಲ್ಲೇದ, ಪ್ರೊ. ಕಿರಣ ಅಂಕಲಕೋಟಿ, ಪ್ರೊ. ಷಣ್ಮುಖ ಗಡ್ಡೆಣ್ಣವರ, ಗ್ರಂಥಪಾಲಕ ಮಲ್ಲಯ್ಯ ಹಿರೇಮಠ ಮುಂತಾದವರಿದ್ದರು.



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಆರ್ಶಿವಾದೊಂದಿಗೆ 6ನೇ ವಾರ್ಡಿನ ಅಂಬೇಡ್ಕರ ನಗರದಲ್ಲಿನ ಶ್ರೀ ಶಾಂತ ದುರ್ಗಾ ದೇವಸ್ಥಾನದ ಜೀರ್ಣೋದ್ದಾರಕ್ಕೆ 50 ಸಾವಿರ ರೂ.ಗಳ ಸಹಾಯಧನವನ್ನು ನೀಡಿದರು. ಈ ಸಂದರ್ಭದಲ್ಲಿ ಸಂಘದ ಯೋಜನಾಧಿಕಾರಿ ಮಹಾಬಲೇಶ್ವರ ಪಟಗಾರ, ನರೇಗಲ್ಲ ಮೇಲ್ವಿಚಾರಕ ಮಹೇಶ ವಿ.ಬಿ., ಸುಮಾ ಕೋರಧಾನ್ಯಮಠ, ಪುಷ್ಪಾ ಜಕ್ಕಲಿ, ವಿಜಯಲಕ್ಷ್ಮೀ ಚಲವಾದಿ, ನಿಂಗಪ್ಪ ಚಲವಾದಿ, ಈರಪ್ಪ ಚಲವಾದಿ, ಕಾಶಪ್ಪ ಚಲವಾದಿ ಮುಂತಾದವರು ಉಪಸ್ಥಿತರಿದ್ದರು.

# ಜಾನಪದ ಸಾಹಿತ್ಯ ವಿಚಾರ ಸಂಕಿರಣ



**■ವಿಜಯಸಾಕ್ಷಿ ಸುದ್ದಿ, ಗದಗ**

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜಾನಪದ ಹಾಡುಗಾರರ ಮೂಲಕ ಹಚ್ಚಿದ ಕಿಚ್ಚು ಹೋರಾಟಗಾರರ ಪ್ರೋತ್ಸಾಹಕ್ಕೆ ಕಾರಣವಾಯಿತು. ಜಾನಪದ ಹಾಡುಗಳು ಸಾಮಾಜಿಕ ಬದಲಾವಣೆಯ ಪ್ರತೀಕ ಎಂದು ಪ್ರಾಚಾರ್ಯರಾದ ಎಂ.ಯು. ಹಿರೇಮಠ ಹೇಳಿದರು.

ಗದಗ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಜರುಗಿದ ಆಂತರಿಕ ಗುಣಮಟ್ಟದ ಭರವಸೆ ಕೋಶ ಅಡಿಯಲ್ಲಿ ಕನ್ನಡ ವಿಭಾಗ ಹಮ್ಮಿಕೊಂಡಿದ್ದ 'ಜಾನಪದ ಸಾಹಿತ್ಯ ವಿಚಾರ ಸಂಕಿರಣ'ದಲ್ಲಿ ಅವರು ಮಾತನಾಡಿದರು.

ಪ್ರೊ.ಬಾಹುಬಲಿ ಜೈನರ ಮಾತನಾಡಿ, ಜಾನಪದ ಸಾಹಿತ್ಯ ಎಲ್ಲಾ ಸಾಹಿತ್ಯದ ತಾಯಿ ಬೇರು. ತಂದೆ, ತಾಯಿ, ಅಣ್ಣ, ಅಕ್ಕ, ತಮ್ಮ, ಬಂಧುಗಳ ಅವಿನಾಭಾವ ಸಂಬಂಧವನ್ನು ನಾವು ಜಾನಪದ ಪದ್ಯಗಳಲ್ಲಿ ಕಾಣಬಹುದು. ಗದ್ಯ, ಪದ್ಯ, ಗಾದೆ, ಒಡಪುಗಳಲ್ಲಿ ಜೀವನ ಹಾಸುಹೊಕ್ಕಾಗಿದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಯು. ಸಜ್ಜನಶೆಟ್ಟರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ. ಪಿ.ಜಿ. ದೇಶಪಾಂಡೆ, ಪ್ರೊ. ಎಸ್.ಕಡ್ಡಿ, ಪ್ರೊ. ಎಸ್.ಎಚ್. ಬಡೇಖಾನ, ಡಾ. ಶಾಂತಾ ಪೂಜಾರ, ಪ್ರೊ. ರೂಪಾ ಶ್ರೀನಿವಾಸ, ಪ್ರೊ. ಬಸುರಾಜ ಕರಬುಡ್ಡಿ, ಪ್ರೊ. ಸಾವಿತ್ರಿ ಮ್ಯಾದರ, ಡಾ. ಸುಜಾತಾ ಬರದೂರ, ಪ್ರೊ. ಸತೀಶ ಸರ್ವಿ, ಪ್ರೊ. ರಿಯಾಜಹ್ಮದ ದೊಡ್ಡಮನಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

# ಯುವ ಶಕ್ತಿಯೇ ದೇಶದ ಶಕ್ತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಸ್ವಾಮಿ ವಿವೇಕಾನಂದರ 161ನೇ ಜಯಂತಿಯ ಅಂಗವಾಗಿ ರಾಷ್ಟ್ರೀಯ ಯುವ ದಿನವನ್ನು ಇಲ್ಲಿನ ಡಿಜಿಎಂ ಆಯುರ್ವೇದ ಮಹಾವಿದ್ಯಾಲಯದಲ್ಲಿ ನೆಹರು ಯುವ ಕೇಂದ್ರ ಗದಗ ಎನ್‌ಎಸ್‌ಎಸ್ ಘಟಕ ಹಾಗೂ ವಿದ್ಯಾರ್ಥಿ ಸಂಘ-2024ರ ಸಹಯೋಗದಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುಧೀರ ಘೋರ್ಪಡೆ ಮಾತನಾಡಿ, ಯುವ ಶಕ್ತಿಯೇ ದೇಶದ ಶಕ್ತಿ. ಈ ಶಕ್ತಿಯನ್ನು ಸ್ವಾರ್ಥಕ್ಕಾಗಿ ಬಳಸದೆ ದೇಶಕ್ಕಾಗಿ ಶ್ರಮಿಸಿದರೆ ಅವರ ಹೆಸರು ಅಮರವಾಗಿ ಚಿಂತನೆಗಳು ನಿತ್ಯ ಚಿರಂತನವಾಗುತ್ತದೆ ಎಂದರು. ಅತಿಥಿಗಳಾಗಿ ಆಗಮಿಸಿದ್ದ ಸಂಚಾರಿ ಪಿಎಸ್‌ಐ ಶಕುಂತಲಾ ನಾಯಕ, ಎಎಸ್‌ಐ ಆರ್.ಎಸ್. ನೀರಲಗಿ ಮತ್ತು ಹೆಡ್ ಕಾನ್ಸ್‌ಟೇಬಲ್ ಎನ್.ಹೆಚ್. ಗುಡ್ಡದ ಇಲಾಖೆಯ ಪರವಾಗಿ ಯುವಕರಲ್ಲಿ ರಸ್ತೆ ಸುರಕ್ಷಾ ಸಪ್ತಾಹದ ಜಾಗೃತಿ ಮೂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಎನ್. ಬೆಳವಡಿ, ದೇಶ ಕಟ್ಟುವಲ್ಲಿ ವಿವೇಕಾನಂದರ ಆದರ್ಶದಾಯಕ ಚಿಂತನೆಗಳನ್ನು ಯುವಕರು ಅಳವಡಿಸಿಕೊಳ್ಳುವ ಅವಶ್ಯಕತೆಯನ್ನು ತಿಳಿಸಿದರು.

ಕಾರ್ಯಕ್ರಮ ಸಂಯೋಜಿಸಿದ್ದ ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ರಂಜಿನಿ ಎನ್. ಹಾಗೂ ವಿದ್ಯಾರ್ಥಿ ಸಂಘದ ಕಾರ್ಯಾಧ್ಯಕ್ಷ ಡಾ. ವಿ.ಎಸ್. ಆಡೂರ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಬೂದೇಶ ಕನಾಜ ಪರಿಚಯಿಸಿದರು. ಅಂಬಿಕಾ ಅವರು ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ರಂಗೋಲಿಯಲ್ಲಿ ಚಿತ್ರಿಸಿದರು.

ಗದಗ ಜಿಲ್ಲೆಯ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಪ್ರತಿನಿಧಿಯಾಗಿ ಆಗಮಿಸಿದ ಶಿವಾನಂದ, ಸ್ಕಿಲ್ ಇಂಡಿಯಾ ಯೋಜನೆಯ ಕುರಿತು ಮಾಹಿತಿ ನೀಡಿದರು. ಮಹಾವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರು, ಅಧ್ಯಾಪಕ ಬಳಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿ.ವಿ ವಿದ್ಯಾರ್ಥಿಗಳು ಹಾಗೂ ಕೆ.ಎಲ್.ಇ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಅವರ ಆದೇಶದ ಮೇರೆಗೆ ಬೆಟಗೇರಿ ಬಡಾವಣೆ ಪಿಎಸ್‌ಐ ಉಮಾ ವಗ್ಗರ ಇವರ ನೇತೃತ್ವದಲ್ಲಿ ಜಿಲ್ಲಾ ಕ್ರೀಡಾ ಶಾಲೆಯ ವಿದ್ಯಾರ್ಥಿಗಳಿಂದ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಿಂದ ಪುಟ್ಟರಾಜ ಸರ್ಕಲ್‌ವರೆಗೆ ಓಟದ ಮೂಲಕ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ವರ್ಗದವರು ಹಾಗೂ ಕ್ರೀಡಾ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನಲಿ 'ರಾಷ್ಟೀಯ ಯುವ ದಿನ'




**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ 162ನೇ ಜಯಂತಿಯನ್ನು ಉತ್ಸಾಹದಿಂದ ಆಚರಿಸಲಾಯಿತು.

ಆಹ್ವಾನಿತರಾದ ಪ್ರೊ. ಅನಿಲ ವೈದ್ಯ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಯುವ ಶಕ್ತಿಯ ಬಗೆಗಿನ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ತಿಳಿಸಿದರು. ಪ್ರಾಂಶುಪಾಲ ಡಾ. ಎಂ.ಎಂ. ಅವಟಿಯವರು ಸಮಾಜಕ್ಕೆ ಯುವಕರಿಂದ ಧನಾತ್ಮಕ ಕೊಡುಗೆಗಳ ಬಗ್ಗೆ ತಿಳಿಸಿದರು.

ಪ್ರೊ. ಜಗದೀಶ ಶಿವನಗುತ್ತಿ ಮತ್ತು ಪ್ರೊ. ಸಂತೋಷಕುಮಾರ ಜಿ.ಎಮ್. ವಿದ್ಯಾರ್ಥಿಗಳಿಂದ 'ರಾಷ್ಟ್ರೀಯ ಯುವ ದಿನ'ದ ಅಂಗವಾಗಿ ನಡಿಗೆಯನ್ನು ಆಯೋಜಿಸಿದ್ದರು. ಪ್ರೊ. ಐ.ಎಸ್. ಪಾಟೀಲ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಈರಣ್ಣ ಕೋರಚಗಾಂವ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರೊ. ಗೌತಮ ರೇವಣಕರ, ಪ್ರೊ. ದಯಾನಂದ ಗೌಡರ, ಪ್ರೊ. ಲೋಕೇಶ, ಪ್ರೊ. ಅಶ್ವಿನಿ ಅರಳಿ, ಪ್ರೊ. ಮಧುಸೂಧನ ಕುಲಕರ್ಣಿ, ಪ್ರೊ. ಶೈಲಜಾ ಮುದೇನಗುಡಿ, ಪ್ರೊ. ಆರ್.ವಿ. ಕಡಿ, ಪ್ರೊ. ಎಸ್.ಎಸ್. ಕಂದಗಲ್ಲ, ಪ್ರೊ. ಮಲ್ಲಿಕಾರ್ಜುನ ಜಿ.ಡಿ., ಪ್ರೊ. ಪ್ರಸನ್ನ ನಾಡಗೌಡ, ಪ್ರೊ. ಸುನೀಲ ಪಾಟೀಲ, ಪ್ರೊ. ವೀರೇಶ ಮಾಗಳದ, ಪ್ರೊ. ವಿಜಯಕುಮಾರ ಮಾಲಗಿತ್ತಿ, ಪ್ರೊ. ಮಹಾಂತ ಕಟ್ಟಿಮನಿ, ಪ್ರೊ. ಮೃತ್ಯುಂಜಯ ಹೂಗಾರ, ಪ್ರೊ. ಶಶಿಧರಗೌಡ ಮುಂತಾದವರು ಪಾಲ್ಗೊಂಡಿದ್ದರು.

## ಡಾ. ಹನುಮಂತಪ್ಪ ಅಂಡಗಿಯವರಿಗೆ ಗೆಳೆಯರ ಬಳಗದಿಂದ ಸನ್ಮಾನ

# ಅಂಡಗಿಯವರಿಗೆ ಶ್ರೇಯಸ್ಸು ಲಭಿಸಲಿ



**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಡಾ. ಹನುಮಂತಪ್ಪ ಅಂಡಗಿ ಅವರು ಕೊಪ್ಪಳ ತಾಲೂಕಿನ ಚಿಲವಾಡಗಿ ಗ್ರಾಮದ ಬಡ ರೈತ ಕುಟುಂಬದಲ್ಲಿ ಜನಿಸಿ, ಬಾಲ್ಯದಿಂದಲೇ ಜ್ಞಾನದಾಹಿಯಾಗಿ ಸಂಸಾರದ ಜಂಜಾಟದ ಜೊತೆಗೆ ಶಿಕ್ಷಕರಾಗಿ, ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. 35 ಗ್ರಂಥಗಳನ್ನು ಹೊರತರುವುದರ ಮೂಲಕ ಕೊಪ್ಪಳ ಜಿಲ್ಲೆಯಲ್ಲಿ ಸಾಹಿತ್ತಿಕ ದಾಖಲೆ ಮಾಡಿದ್ದಾರೆ. ಇವರಿಗೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಲಭಿಸಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷರಾದ ಜಿ.ಎಸ್. ಗೋನಾಳ ಹೇಳಿದರು.

ಅವರು ಕೊಪ್ಪಳದ ಮಂಜುನಾಥ ಸೊರಟೂರರ ಮುದ್ರಣಾಲಯದಲ್ಲಿ ಹನುಮಂತಪ್ಪ ಅಂಡಗಿ ಅವರು ಪಿಎಚ್‌ಡಿ ಪಡೆದುದಕ್ಕಾಗಿ ಅವರಿಗೆ ಗೆಳೆಯರ ಬಳಗದಿಂದ ಹಮ್ಮಿಕೊಂಡ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಿರಿಯ ಪತ್ರಕರ್ತ ಎಂ.ಸಾಧಿಕ್ ಅಲಿ ಮಾತನಾಡಿ, ಅನ್ನದಾತ ರೈತರಂತೆ ಡಾ. ಹನುಮಂತಪ್ಪ ಅಂಡಗಿಯವರು ನಮಗೆ ಸುದ್ದಿದಾತರು. ನಾನು ಇವರ ಸಾಹಿತ್ಯ ಚಟುವಟಿಕೆಗಳನ್ನು ಆರಂಭದಿಂದಲೂ ಗಮನಿಸುತ್ತಾ ಬಂದಿದ್ದೇನೆ. ಸದಾ ಒಂದಿಲ್ಲೊಂದು ಸಾಹಿತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಇವರೊಬ್ಬ ಕ್ರಿಯಾಶೀಲ ಸಾಹಿತಿಯಾಗಿದ್ದಾರೆ. ನಮ್ಮ ಕಣ್ಣಮುಂದೆಯೇ ಬೆಳೆದ ಇಂತಹ ಸಾಹಿತಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿರುವುದು ಅತೀವ ಸಂತಸ ತಂದಿದೆ ಎಂದರು.

ಯಲಬುರ್ಗಾ ಪಿಎಲ್‌ಡಿ ಬ್ಯಾಂಕಿನ ಮಾಜಿ ಅಧ್ಯಕ್ಷ ಮಂಜುನಾಥ ಸೊರಟೂರು ಮಾತನಾಡಿ, ನಾನು ಇತ್ತೀಚೆಗೆ ಹಿರೇಸಿಂದೋಗಿಗೆ ಹೋದಾಗ ಆ ಗ್ರಾಮದ ಜನರು ಡಾ. ಹನುಮಂತಪ್ಪ ಅಂಡಗಿ ಅವರ ವ್ಯಕ್ತಿತ್ವವನ್ನು ಕೊಂಡಾಡುತ್ತಿದ್ದರು. ಹಲವಾರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದ ಇವರು ಕಾಯಕವೇ ಕೈಲಾಸ ಎಂಬಂತೆ ತಮ್ಮ ವೃತ್ತಿಯನ್ನು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಾ, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಇಂಥವರು ನಮ್ಮ ವಲಯದಲ್ಲಿರುವುದು ಅಭಿಮಾನದ ಸಂಗತಿ ಎಂದರು.

ಕೊಪ್ಪಳ ವಿಶ್ವವಿದ್ಯಾಲಯದ ಕನ್ನಡ ಅತಿಥಿ ಉಪನ್ಯಾಸಕರಾದ ಡಾ. ಪ್ರವೀಣ ಪಾಟೀಲ ಮಾತನಾಡುತ್ತಾ, ಡಾ. ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರಲ್ಲಿ ಜ್ಞಾನದ ದಾಹ, ಹಂಬಲ, ತುಡಿತವಿದೆ. ಕೊಪ್ಪಳದಲ್ಲಿ ಇಂತಹ ಕ್ರಿಯಾಶೀಲ ಮತ್ತು ಬಹುಮುಖ ಪ್ರತಿಭೆಯ ಸಂಶೋಧಕರ ಅವಶ್ಯಕತೆಯಿದೆ. ಇವರು ಮುಂದಿನ ದಿನಮಾನಗಳಲ್ಲಿ ತಮ್ಮ ಜೀವನದ ಅಮೂಲ್ಯ ಸಮಯವನ್ನು ಕನ್ನಡ ಸಾಹಿತ್ಯದ ಬೆಳವಣಿಗೆ ಮತ್ತು ಸಂಶೋಧನೆಗಾಗಿಯೇ ಮೀಸಲಿರಿಸಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರಾದ ವೈ. ಬಿ.ಜೂಡಿ, ಶಿವರಾಜ ನುಗಡೋಣಿ, ಶಿವಕುಮಾರ ಹಿರೇಮಠ, ಉದಯ ತೋಟದ, ಉಮೇಶ ಪೂಜಾರ, ಮಂಜುನಾಥ ಕೋಳೂರು, ಚಿನ್ನಪ್ಪ ಗುಳಗುಳಿ, ಫಕೀರಪ್ಪ ಗೋಟೂರ, ಸಾಹಿತ್ಯ ಅಭಿಮಾನಿಗಳಾದ ಅಮರೇಶ ಸಿದ್ದಾಪುರ, ಶಿವಾನಂದ ಜಾಲಿಹಾಳ, ಬಸವರಾಜ ಹೂಗಾರ, ತಾಜಪಾಶ ಮಕಾಂದಾರ ಉಪಸ್ಥಿತರಿದ್ದರು.

## ಸಿದ್ಧನಕೊಳ್ಳದ ಮಠದದಲ್ಲಿ ಜ.14ರಿಂದ 16ರವರೆಗೆ ಜಾತ್ರಾ ಮಹೋತ್ಸವ, ಶ್ರೀ ಸಿದ್ಧಶ್ರೀ ರಾಷ್ಟ್ರೀಯ ಉತ್ಸವ

# ನಟ ಶೋಭರಾಜ್‌ಗೆ 'ಶ್ರೀ ಸಿದ್ಧಶ್ರೀ' ಪ್ರಶಸ್ತಿ




**■ವಿಜಯಸಾಕ್ಷಿ ಸುದ್ದಿ, ಸಿದ್ದನಕೊಳ್ಳ**

ಬಾಗಲಕೋಟೆ ಜಿಲ್ಲೆಯ ಇಲಕಲ್ಲ ತಾಲೂಕಿನ ಸುಕ್ಷೇತ್ರ ಸಿದ್ದನಕೊಳ್ಳದ ನಿರಂತರ ದಾಸೋಹ ಮತ್ತು ಕಲಾಪೋಷಕರ ಮಠದ ಶ್ರೀ ಸಿದ್ದಪ್ಪಜ್ಜನ ಜಾತ್ರಾ ಮಹೋತ್ಸವ, ಶ್ರೀ ಸಿದ್ಧಶ್ರೀ ರಾಷ್ಟ್ರೀಯ ಉತ್ಸವ-2024 ಕಾರ್ಯಕ್ರಮಗಳು ಜ.14ರಿಂದ 16ರವರೆಗೆ ಮೂರು ದಿನಗಳ ಕಾಲ ಅದ್ದೂರಿಯಾಗಿ ಜರುಗಲಿದೆ. 'ಶ್ರೀ ಸಿದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ'ಯನ್ನು ಚಲನಚಿತ್ರ ಕಲಾವಿದ ಶೋಭರಾಜರಿಗೆ ನೀಡಲಾಗುತ್ತಿದೆ ಎಂದು ಧರ್ಮಾಧಿಕಾರಿಗಳಾದ ಡಾ.ಶಿವಕುಮಾರ ಮಹಾ ಸ್ವಾಮಿಗಳು ಹೇಳಿದರು.

ಅವರು ಸಿದ್ಧನಕೊಳ್ಳದ ಮಠದದಲ್ಲಿ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ವಿವರಗಳನ್ನು ನೀಡಿದರು.

ಬೆಂಗಳೂರಿನ ಡಾ. ಆರ್. ಎಸ್. ರಾಜು ಹೆಲಿಕಾಪ್ಟರ್ ಮೂಲಕ ರಥದ ಮೇಲೆ ಹೂಮಳೆಗರೆಯಲಿದ್ದಾರೆ. ಶಾಸಕ ವಿಜಯಾನಂದ ಕಾಶಪ್ಪನವರ, ಕೆಪಿಸಿಸಿ ಪ್ರ.ಕಾರ್ಯದರ್ಶಿ ವೀಣಾ ಕಾಶಪ್ಪನವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದಿ.15ರಂದು ಚಲನಚಿತ್ರೋತ್ಸವವನ್ನು ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವ ವಿ.ಸೋಮಣ್ಣ ಉದ್ಘಾಟಿಸಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಶಾಸಕ ಕಾಶಪ್ಪನವರ ದಂಪತಿ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಪಾಲ್ಗೊಳ್ಳಲಿದ್ದಾರೆ. ಇದು ಭಕ್ತರಮಠ. ಇಲ್ಲಿ ಬರುವವರೆಲ್ಲರೂ ಸಿದ್ಧಪ್ಪಜ್ಜನ ಭಕ್ತರೇ. ಜಾತಿ, ಧರ್ಮ, ಮೇಲು-ಕೀಳು, ರಾಜಕೀಯ ಇಲ್ಲಿ ಇಲ್ಲ ಎಂದರು.

ಪ್ರಸಕ್ತ ವರ್ಷ ಶ್ರೀ ಸಿದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿಯನ್ನು 700ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿ, ವಿಭಿನ್ನ ಪಾತ್ರಗಳ ಮೂಲಕ ಜನಮನಗೆದ್ದಿರುವ ನಟ ಶೋಭರಾಜರಿಗೆ ನೀಡಲಾಗುತ್ತಿದೆ. ರಾಜ್ಯ, ಹೊರರಾಜ್ಯದ ಹೆಸರಾಂತ ಕಲಾವಿದರು, ನಮ್ಮ ಭಾಗದ ಪ್ರತಿಭೆಗಳೂ ಮನರಂಜನೆ, ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ನೀಡಲಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಚಲನಚಿತ್ರ, ಕಿರುಚಿತ್ರಗಳ ಹಾಡು, ಟೀಸರ್‌ಗಳು ಬಿಡುಗಡೆಯಾಗಲಿವೆ. ಆ ಚಿತ್ರಗಳ ನಟರು, ತಂಡದವರು ಪಾಲ್ಗೊಳ್ಳಲಿದ್ದಾರೆ ಎಂದು ಡಾ.ಶಿವಕುಮಾರ ಮಹಾಸ್ವಾಮಿಗಳು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಚಿತ್ರ ನಿರ್ಮಾಪಕ ಘನಶ್ಯಾಮ ಬಾಂಡಗೆ, ಸಂಗಮೇಶ ಹುದ್ದಾರ, ಚಲನಚಿತ್ರೋತ್ಸವ ಸಮಿತಿ ಸಂಚಾಲಕ ಡಾ.ಪ್ರಭು ಗಂಜಿಹಾಳ, ರಾಜುಗೌಡ ನಾಡಗೌಡ, ಕಲಾವಿದರಾದ ವೀರೇಶ (ಪುರವಂತರ)ಐಹೊಳ್ಳಿ, ಸಂಗನಗೌಡ ಕುರುಡಗಿ, ಮಂಜುಳಾ ರೇವಡಿ, ರೇಣುಕಾ ಬಗಲಿ ಮೊದಲಾದವರು ಉಪಸ್ಥಿತರಿದ್ದರು.

# ಶಾಸಕರು ಸ್ವಯಂ ಅಂಕುಶ ಇಟ್ಟುಕೊಳ್ಳಬೇಕು

▶▶ಮೊದಲನೇ ಪುಟದಿಂದ




ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಮಾತನಾಡಿ, ಎಚ್.ಕೆ. ಪಾಟೀಲರ ಕಾರ್ಯ ಸ್ಮರಣೀಯ. ಈ ಸಂಪುಟಗಳು ಯುವ ಪೀಳಿಗೆಗೆ ಮಾದರಿಯಾಗಲಿ. ಎಚ್.ಕೆ. ಪಾಟೀಲರು ಎಲ್ಲರನ್ನೂ ಗೌರವದಿಂದ ಕಾಣುತ್ತಾರೆ. ಅವರಲ್ಲಿ ಅಪರಿಮಿತ ತಾಳ್ಮೆ, ಸಹನೆ ಇದೆ. ಅವರಿಂದ ಯುವ ಪೀಳಿಗೆ ಕಲಿಯುವುದು ಸಾಕಷ್ಟಿದೆ. ಪಾಟೀಲರಿಗೆ ಮುಖ್ಯಮಂತ್ರಿ ಆಗುವ ಅವಕಾಶವೂ ಇದೆ ಎಂದರು.

ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ಸದನಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಅಧಃಪತನವಾಗುತ್ತಿದ್ದು, ಅವುಗಳ ಪುನರುತ್ಥಾನ ಆಗಬೇಕಿದೆ. ಈ ವಿಷಯವಾಗಿ ನಾವು ಗಂಭೀರ ಚಿಂತನೆ ಮಾಡಬೇಕಿದೆ. 25 ವರ್ಷಗಳ ಹಿಂದೆ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ ಗೌರವ ವಾಚಕ ಹೇಳದೇ ಯಾರೂ ಭಾಷಣ ಪ್ರಾರಂಭ ಮಾಡುತ್ತಿರಲಿಲ್ಲ. ಎಷ್ಟೇ ಮಿತ್ರ ಸದಸ್ಯರು ಇದ್ದರೂ ಗೌರವಾನ್ವಿತ ಸದಸ್ಯರೇ, ಗೌರವಾನ್ವಿತ ಅಧ್ಯಕ್ಷರೇ ಎಂದೇ ಮಾತು ಪ್ರಾರಂಭಿಸುತ್ತಿದ್ದರು. ಆದರೆ, ಪ್ರಸ್ತುತ ಗೌರವ ವಾಚಕ ಶಬ್ದಗಳೇ ಅಪರೂಪವಾಗಿವೆ. ಅಲ್ಲದೇ, ಒಂಟಿ ಅಕ್ಷರದಲ್ಲೂ ಮಾತನಾಡುವಷ್ಟು ವಾತಾವರಣ ಹದಗೆಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ಮಾತನಾಡಿದರು. ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ, ಕೃವಿವಿ ಕುಲಪತಿ ಡಾ. ಪಿ.ಎಲ್. ಪಾಟೀಲ, ಕಾ.ತ. ಚಿಕ್ಕಣ್ಣ, ನೂರಹ್ಮದ್ ಮಕಾನದಾರ, ಡಾ. ರೇವಯ್ಯ ಒಡೆಯರ್, ಕಸಾಪ ಅಧ್ಯಕ್ಷ ಡಾ. ಮಹೇಶ ಜೋಶಿ ಮುಂತಾದವರು ವೇದಿಕೆಯಲ್ಲಿದ್ದರು.

## ಕಾಲಕಾಲೇಶ್ವರ ವೃತ್ತದಲ್ಲಿ ಸಿಐಟಿಯು ಸಂಘಟನೆಯಿಂದ ಪ್ರತಿಭಟನೆ

# ದುಡಿಯುವ ವರ್ಗಕ್ಕೆ ಸರ್ಕಾರಗಳು ದ್ರೋಹವೆಸಗಿವೆ




**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ದೇಶದಲ್ಲಿ ಆಹಾರ, ಆರೋಗ್ಯ, ಶಿಕ್ಷಣ ಉಳಿಸಿ ದೇಶವನ್ನು ಅಭಿವೃದ್ಧಿಪಡಿಸುವುದರೊಂದಿಗೆ ದುಡಿಯುವ ವರ್ಗವಕ್ಕೆ ಸಮಾನ ವೇತನ ನೀಡಿದೆ ಸರ್ಕಾರಗಳು ದ್ರೋಹ ಮಾಡುತ್ತಿವೆ ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಾರುತಿ ಚಿಟಗಿ ಆರೋಪಿಸಿದರು.

ಜಿಲ್ಲಾ ಕೇಂದ್ರಗಳಲ್ಲಿ ಸಂಸದರ ಕಚೇರಿ ಚಲೋ ಹಿನ್ನೆಲೆಯಲ್ಲಿ ಶುಕ್ರವಾರ ಸ್ಥಳೀಯ ಕಾಲಕಾಲೇಶ್ವರ ವೃತ್ತದಲ್ಲಿ ಸಿಐಟಿಯು ಸಂಘಟನೆಯಿಂದ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಕಾರ್ಮಿಕ ಮುಖಂಡ ಪೀರು ರಾಠೋಡ ಮಾತನಾಡಿ, ಕೇಂದ್ರ ಸರ್ಕಾರವು ವಿದ್ಯುತ್, ರೈಲ್ವೆ ಸೇರಿದಂತೆ ಸಾರ್ವಜನಿಕ ವಲಯಗಳನ್ನು ಖಾಸಗೀಕರಣ ಮಾಡುವ ಮೂಲಕ ದೇಶದ ಸಂಪತ್ತು ಹಾಗೂ ನೌಕರರನ್ನು ಖಾಸಗಿಯವರ ಕೈವಶವಾಗಿಸುವ ಹುನ್ನಾರ ನಡೆಯುತ್ತಿರುವುದು ಒಂದೆಡೆಯಾದರೆ, 29 ಕಾರ್ಮಿಕ ಕಾನೂನುಗಳ ಸಂಹಿತೆಗಳಾಗಿ ಮಾಡುವ ಮೂಲಕ ಕಾರ್ಮಿಕ ವಲಯವನ್ನು ಸಂಕಷ್ಟಕ್ಕೆ ಸಿಲುಕಿಸಲಾಗುತ್ತಿದೆ. ಹೀಗಾಗಿ ಸರ್ಕಾರವು ಕಾರ್ಮಿಕರ ಪರವಾದ ನೀತಿಗಳನ್ನು ಜಾರಿ ಮಾಡಬೇಕು.

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟು ರಾಜಕಾರಣ ಮಾಡುವ ಬದಲು, ಜನತೆಯ ದಿಕ್ಕು ತಪ್ಪಿಸುವ ದಿಸೆಯಲ್ಲಿ ಆಡಳಿತ ಮಾಡುತ್ತಿದೆ. ದೇಶದ ಸಂಪತ್ತಾಗಿರುವ ಕಾರ್ಮಿಕ ವಲಯ ಸೇರಿ 1 ಕೋಟಿ ನೌಕರರಿಗೆ ಕನಿಷ್ಠ ವೇತನ, ನಿವೃತ್ತಿ ಸೌಲಭ್ಯಗಳು ಸಿಗದಂತಾಗಿವೆ. ಗುತ್ತಿಗೆ, ಹೊರಗುತ್ತಿಗೆ ಹಾಗೂ ಒಳಗುತ್ತಿಗೆ ನೌಕರರನ್ನು ಖಾಯಂ ಮಾಡಿ, ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ ಮಾಡಬೇಕು ಮತ್ತು ಖಾಯಂ ಮಾಡಲು ವಿಶೇಷ ಕಾನೂನು ರಚಿಸಬೇಕು ಎಂದು ಮಾರುತಿ ಚಿಟಗಿ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರ ಭರವಸೆ ನೀಡಿದ 6ನೇ ಗ್ಯಾರಂಟಿಯಾದ ಅಂಗನವಾಡಿ ನೌಕರರಿಗೆ ರೂ.15 ಸಾವಿರ ಹಾಗೂ ಬಿಟಿಯೂಟದವರಿಗೆ ರೂ.6 ಸಾವಿರ ವೇತನ ಮತ್ತು ನಿವೃತ್ತಿ ಸೌಲಭ್ಯ ಜಾರಿ ಮಾಡಲು ಮುಂದಾಗಬೇಕು ಎಂಬ ಬೇಡಿಕೆಗಳ ಈಡೇರಿಕೆಗಾಗಿ ಜ.23ರಂದು ಸಂಸದರ ಕಚೇರಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಎಸ್‌ಎಫ್‌ಐ ಜಿಲ್ಲಾ ಉಪಾಧ್ಯಕ್ಷ ಚಂದ್ರು ರಾಠೋಡ, ಮೈಬೂ ಹವಾಲ್ದಾರ, ಅನಿಲ ರಾಠೋಡ, ತುಕಾರಾಂ ಚವ್ಹಾಣ, ಲಕ್ಷ್ಮಣ ಲಮಾಣಿ, ಮಹಾದೇವಿ ಚಿಟಗಿ, ಕನಕರಾಯ ಹಾದಿಮನಿ ಸೇರಿ ಇತರರು ಇದ್ದರು.

## ಶಿವಾನಂದ ಪ.ಪೂ ವಿಜ್ಞಾನ ಕಾಲೇಜಿನಲ್ಲಿ ವಾರ್ಷಿಕೋತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ಯಶಸ್ಸು ಸಾಧಿಸಬೇಕೆಂದರೆ ದೃಢವಾದ ಮನಸ್ಸು ಇರಬೇಕು. ಸಾಧನೆಯ ಹಾದಿಯಲ್ಲಿ ಮುನ್ನೆಡೆದು ಪ್ರಗತಿಗಾಗಿ ಶ್ರಮಿಸಿದರೆ ಯಾವುದೇ ಆತಂಕಗಳು ಬಂದರೂ ಯಾವುದೇ ಶಾರೀರಿಕ, ಭೌದ್ಧಿಕ, ಮಾನಸಿಕ ನ್ಯೂನತೆಗಳಿದ್ದರೂ ಯಶಸ್ಸನ್ನು ಸಾಧಿಸಬಹುದು ಎಂದು ಕೆಎಲ್ಇ ಕಾಲೇಜಿನ ಪ್ರೊ.ವೀಣಾ ಆರ್ ತಿರ್ಲಾಪೂರ ನುಡಿದರು.

ಅವರು ಇಲ್ಲಿನ ಜಗದ್ಗುರು ಶ್ರೀ ಶಿವಾನಂದ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರಾಚಾರ್ಯ ಎಸ್.ವ್ಹಿ. ವೆರ್ಣೇಕರ ಮಾತನಾಡಿ, ಪರೀಕ್ಷೆ ಸಮೀಪಿಸಿರುವುದರಿಂದ ವಿದ್ಯಾರ್ಥಿಗಳು ಸಮಯವನ್ನು ವ್ಯರ್ಥ ಮಾಡದೇ ಜ್ಞಾನಾರ್ಜನೆಯಲ್ಲಿ ತೊಡಗಿ, ನಮ್ಮ ಕಾಲೇಜಿಗೆ ಉತ್ತಮ ಫಲಿತಾಂಶ ತರಲು ಮುಂದಾಗಬೇಕು ಎಂದರು.

ಸಿಂದು ಚಿಮಲ, ತೇಜಸ್ವಿನಿ ತಾಳಿಕೋಟಿ, ತೇಜಶ್ವಿನಿ ತುಕ್ಕಪ್ಪನವರ ಪ್ರಾರ್ಥಿಸಿದರು. ನಿವೃತ್ತ ಪ್ರಾಚಾರ್ಯ ಡಾ. ಜಿ.ಬಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು. ಚೇತನಾ ಬೊಮ್ಮಪ್ಪನವರು ಸ್ವಾಗತಿಸಿದರು. ಎಸ್.ಬಿ. ಹಿರೇಮಠ ಅತಿಥಿಗಳನ್ನು ಪರಿಚಯಿಸಿದರು. ಪ್ರಿಯಾಂಕಾ ಪಾಟೀಲ ನಿರೂಪಿಸಿದರು. ಉಪನ್ಯಾಸಕ ಎಂ.ಪಿ. ಮಂಟೂರ ವರದಿ ವಾಚಿಸಿದರು. ಕೃಷ್ಣಪ್ರಸಾದ ಜಾಧವ ಇವರು ಬಹುಮಾನ ವಿತರಿಸಿದರು. ಮಂಜುನಾಥ ಬಾರ್ಕಿ ವಂದಿಸಿದರು.

## ಎಫ್.ಪಿ. ಲಕ್ಷ್ಮೇಶ್ವರಮಠರಿಗೆ ಗುಲ್ಬರ್ಗಾ ವಿ.ವಿ ರಾಜ್ಯೋತ್ಸವ ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಿರಿಯ ಸಾಹಿತಿ ಹಾಗೂ ಜಿಲ್ಲಾ ಗ್ರಾಹಕ ನ್ಯಾಯಾಲಯದ ನಿವೃತ್ತ ಸದಸ್ಯ ಎಫ್.ಪಿ. ಲಕ್ಷ್ಮೇಶ್ವರಮಠರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯವು 2022ರ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದೆ. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲರ ಇಂಗ್ಲೀಷ



ಕೃತಿ 'ಮಾನವ ಹಕ್ಕುಗಳು' ಕನ್ನಡ ಅನುವಾದ ಕೃತಿಗಾಗಿ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶ್ರೀಯುತರು ಕಾನೂನು ವಿಶ್ವವಿದ್ಯಾಲಯದ ಪಠ್ಯಾನುಸಾರ ಅನೇಕ ಪಠ್ಯಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ.

ಪ್ರಶಸ್ತಿ ವಿಜೇತ ಲಕ್ಷ್ಮೇಶ್ವರಮಠರಿಗೆ ಅವರ ಆತ್ಮೀಯ ಸ್ನೇಹ ಬಳಗ, ಹಿತೈಷಿಗಳು ಶುಭ ಹಾರೈಸಿದ್ದಾರೆ.

## ಸ್ವಾಮಿ ವಿವೇಕಾನಂದರ ಜೀವನ ಮಾದರಿಯಾಗಲಿ




■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಜಗತ್ತಿನ ಯುವ ಸಮೂಹವನ್ನು ಭಾರತದ ಕಡೆ ನೋಡುವಂತೆ ಮಾಡಿದ ಸ್ವಾಮಿ ವಿವೇಕಾನಂದರ ಜೀವನದ ತತ್ವ, ಆದರ್ಶಗಳನ್ನು ಇಂದಿನ ಯುವಕರು ರೂಢಿಸಿಕೊಳ್ಳಲು ಮುಂದಾಗಬೇಕು ಎಂದು ಬಿಜೆಪಿ ನಗರ ಘಟಕದ ಅಧ್ಯಕ್ಷ ರಾಜೇಂದ್ರ ಘೋರ್ಪಡೆ ಹೇಳಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ರೋಣ ಮಂಡಲದ ವತಿಯಿಂದ ನಡೆದ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸದೃಢ ಯುವಕರು ದೇಶದ ನಿಜವಾದ ಸಂಪತ್ತು. ಯುವಕರಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂಬ ಸಂದೇಶವನ್ನು ದೇಶದುದ್ದಕ್ಕೂ ಸಾರಿದ ವಿವೇಕಾನಂದರು ಭವ್ಯ ಪರಂಪರೆಯನ್ನು ವಿದೇಶಗಳಲ್ಲಿಯೂ ಜಾಗೃತಿ ಮೂಡಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದರು.

ಮುಖಂಡ ಉಮೇಶ ಚನ್ನು ಪಾಟೀಲ ಮಾತನಾಡಿ, ಭಾರತ ವೈಚಾರಿಕತೆಯಂತಹ ಪ್ರಾಚೀನ ಸಂಸ್ಕೃತಿಯನ್ನು ಸಾರಿ ಹೇಳುವ ಪರಂಪರೆಯನ್ನು ಹೊಂದಿದೆ. ಇಂತಹ ಪರಂಪರೆ ಉಳಿಯಬೇಕಾದರೆ ಇಂದಿನ ಯುವಕರು ಸ್ವಾಮಿ ವಿವೇಕಾನಂದರ ಆದರ್ಶ, ತತ್ವ ಸಿದ್ಧಾಂತಗಳನ್ನು ಅರಿತು, ಅವುಗಳನ್ನು ಜೀವನದಲ್ಲಿ ಮೈಗೂಡಿಸಿಕೊಂಡು ಸಾಗುವುದು ಸೂಕ್ತವೆಂದು ಸಲಹೆ ನೀಡಿದರು.

ಯು.ಆರ್. ಚನ್ನಮ್ಮನವರು, ಕನಕಪ್ಪ ಅರಳಿಗಿಡದ, ರವಿ ಶಿಂಗ್ರೀ, ಮಹಾಂತೇಶ ಪೂಜಾರ, ಸುಭಾಷ ಮ್ಯಾಗೇರಿ, ಸಿದ್ದಣ್ಣ ಚೋಳಿನ್, ಯಮನೂರು ತಿರಕೋಜಿ, ಬಾಲಾಜಿ ಬೋಸ್ಲೆ, ಶರಣಪ್ಪ ಉಪ್ಪಿನಬೇಟಗೇರಿ, ದುರ್ಗಪ್ಪ ಮುಧೋಳ, ಕುಮಾರ ರಾಥೋಡ ಮುಂತಾದವರಿದ್ದರು.

### ಜ.15, 16ರಂದು ಲಕ್ಷ್ಮೇಶ್ವರದ ಐತಿಹಾಸಿಕ ಅಗಸ್ತ್ಯ ತೀರ್ಥದಲ್ಲಿ ಜಾತ್ರಾಮಹೋತ್ಸವ

# ಬನ್ನಿ, ಪುಣ್ಯಕ್ಷೇತ್ರದ ರಥ ಎಳೆಯೋಣ





■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಗಸ್ತ್ಯ ಮಹಾಋಷಿಗಳು ಶಿವಲಿಂಗ ಸ್ಥಾಪಿಸಿ ಪೂಜೆಗೈದ ಪಟ್ಟಣದ ಐತಿಹಾಸಿಕ ಅಗಸ್ತ್ಯ ತೀರ್ಥದ ಜಾತ್ರಾಮಹೋತ್ಸವ ಸಂಕ್ರಮಣ ಪುಣ್ಯಕಾಲದಲ್ಲಿ ಜರುಗಲಿದೆ. ಜ.15ರ ಸಂಜೆ 5 ಗಂಟೆಗೆ ರಥೋತ್ಸವ ಮತ್ತು ಜ.16ರಂದು ಕಡುಬಿನ ಕಾಳ ನೆರವೇರಲಿದೆ. ಸಂಕ್ರಮಣ ಜಾತ್ರೆಗೆ ಬರುವ ಭಕ್ತರು ಈ ತೀರ್ಥ ಬಾವಿಗಳಲ್ಲಿ ಪುಣ್ಯಸ್ನಾನ ಮಾಡಿ, ಶಿವನ ದರ್ಶನ ಪಡೆದು ಪುನೀತರಾಗುತ್ತಾರೆ. ಮಂಡಕ್ಕಿ-ಖಾರಾ-ಮಿರ್ಚಿ ಈ ಜಾತ್ರೆಯ ವಿಶೇಷವಾಗಿದೆ.

ಅಗಸ್ತ್ಯ ತೀರ್ಥದ ಇತಿಹಾಸ: ಪಟ್ಟಣದ ಪೂರ್ವಾಗ್ನೇಯದಲ್ಲಿರುವ ಈ ಪವಿತ್ರ ತೀರ್ಥ ಕ್ಷೇತ್ರದಲ್ಲಿ ಸಪ್ತ ಋಷಿಗಳಲ್ಲೊಬ್ಬರಾದ ವೇದ ಮಹರ್ಷಿ ಅಗಸ್ತ್ಯ ಮುನಿಗಳು ಶಿವಲಿಂಗ ಪ್ರತಿಷ್ಠಾಪಿಸಿ ತಪಸ್ಸು ಆಚರಿಸಿದ ಐತಿಹ್ಯವಿದೆ. ಗುಹೆಯ ಸ್ವರೂಪದ ಕಲ್ಲಿನ ಮಂಟಪದ ಈಶ್ವರ ದೇವಸ್ಥಾನದಲ್ಲಿ ಶಿವಲಿಂಗ ಎದುರಿಗೆ ನಂದಿ ಇದೆ. ಇಲ್ಲಿ ಅಕ್ಕ(ಗಂಗೆ)-ತಂಗಿ(ಗೌರಿ) ಹೆಸರಿನ 2 ತೀರ್ಥಗಳಿವೆ. ಈ ಹೊಂಡದಲ್ಲಿ ಸ್ನಾನ ಮಾಡಿದರೆ ರೋಗ-ರುಜಿನಗಳು ಮಾಯವಾಗಿ, ಪಾಪಕರ್ಮಗಳು ಕಳೆದು ಪುಣ್ಯ ಲಭಿಸುತ್ತದೆ. ಇಲ್ಲಿನ ಅಣ್ಣ-ತಂಗಿ ದೇವಸ್ಥಾನದ ಕುರಿತು ಐತಿಹ್ಯವೊಂದಿದೆ. ಒಮ್ಮೆ ಅಣ್ಣ ಯಾವುದೋ ಕಾರಣಕ್ಕೆ ತಂಗಿಗೆ ಕಾಲಿನಿಂದ ಒದ್ದಿರುವ ಪರಿಣಾಮವಾಗಿ ಅಣ್ಣನ ಕಾಲಿನಲ್ಲಿ ಹುಳುಗಳು ಬಿದ್ದಿರುತ್ತವೆ. ಆ ಹುಳುಗಳನ್ನು ಹೆಕ್ಕಿ ತೆಗೆಯುತ್ತಿರುವ ಇಲ್ಲಿರುವ ಕಲ್ಲಿನ ಮೂರ್ತಿಯ ಕಥೆಯನ್ನು ಹಿರಿಯ ಜೀವಿ ಪಾರ್ವತಮ್ಮ ಮೆಕ್ಕಿ ಹೇಳುತ್ತಾರೆ.

> ಲಕ್ಷ್ಮೇಶ್ವರ ಪಟ್ಟಣದಲ್ಲಿ ಅಗಸ್ತ್ಯತೀರ್ಥ, ಶಂಕರತೀರ್ಥ, ಖಡ್ಗತೀರ್ಥ, ಲಕ್ಷ್ಮಣತೀರ್ಥ ಹಾಗೂ ಕಣ್ವತೀರ್ಥಗಳೆಂಬ ಪಂಚತೀರ್ಥಗಳು ಇದ್ದವು. ಪ್ರಸ್ತುತ 3 ತೀರ್ಥಗಳು ಅಸ್ತಿತ್ವ ಕಳೆದುಕೊಳ್ಳುತ್ತಿದ್ದರೆ ಲಕ್ಷ್ಮಣತೀರ್ಥ ಮತ್ತು ಅಗಸ್ತ್ಯತೀರ್ಥಗಳೂ ಅವಸಾನದಂಚಿಗೆ ತಲುಪಿವೆ. ಈ ಪವಿತ್ರ ಮತ್ತು ಇತಿಹಾಸ ಪ್ರಸಿದ್ಧ ಪ್ರದೇಶವನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವತ್ತ ಜನಪ್ರತಿನಿಧಿಗಳು, ಜಿಲ್ಲಾ ಮತ್ತು ಸ್ಥಳೀಯ ಆಡಳಿತ ಮುಂದಾಗಬೇಕು ಎಂದು ನಾಗರಿಕರಾದ ಸೋಮೇಶ ಉಪನಾಳ, ವಿಜಯ ಕುಂಬಾರ ಆಗ್ರಹಿಸಿದ್ದಾರೆ.

ಇಲ್ಲಿದ್ದ ಶಾಸನವೊಂದರ ಬಗ್ಗೆ ಹಂಪಿ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದ ಡಾ. ಪರಶಿವಮೂರ್ತಿ ಅಧ್ಯಯನ ಮಾಡಿ, ಇಲ್ಲಿರುವ ಶಾಸನವೊಂದು ಕಲ್ಯಾಣ ಚಾಲುಕ್ಯ ಚಕ್ರವರ್ತಿ 6ನೇ ವಿಕ್ರಮಾದಿತ್ಯನ ಶಾಸನವಾಗಿದೆ. ಈ ಶಾಸನ 7 ಅಡಿ ಎತ್ತರ, 3.5 ಅಡಿ ಅಗಲವಿದ್ದು, ಈ ಶಾಸನದಲ್ಲಿ ಅಗಸ್ತ್ಯತೀರ್ಥದ ಬಗ್ಗೆ ವರ್ಣಿಸಲಾಗಿದೆ. ಇಲ್ಲಿನ ಈಶ್ವರ ದೇವಸ್ಥಾನ 10ನೇ ಶತಮಾನದ್ದಾಗಿದೆ ಎಂಬ ಮಾಹಿತಿ ನೀಡಿದ್ದಾರೆ. ಇಂತಹ ಹತ್ತಾರು ಶಾಸನಗಳು ಲಕ್ಷ್ಮೇಶ್ವರದ ಅಲ್ಲಲ್ಲಿ ಹಾಳಾಗುತ್ತಿರುವುದನ್ನು ಗಮನಿಸಿ ಅವುಗಳನ್ನು ಇಲ್ಲಿನ ಸೋಮೇಶ್ವರ ದೇವಸ್ಥಾನದಲ್ಲಿ ಸಂರಕ್ಷಿಸಲಾಗಿದೆ.

ಗುಹೆಯ ಸ್ವರೂಪದಲ್ಲಿರುವ ಇಲ್ಲಿನ ದೇವಸ್ಥಾನದಲ್ಲಿ ಸುಂದರವಾದ ಶಿವಲಿಂಗದ ಮೂರ್ತಿ ಎದುರಿಗೆ ನಂದಿ ಇದೆ. ಮಳೆಗಾಲದಲ್ಲಿ ತೀರ್ಥ ತುಂಬಿ ದೇವಸ್ಥಾನದ ಮೂರ್ತಿಗಳು ಜಲಾವೃತಗೊಳ್ಳುತ್ತವೆ. ಸದ್ಯ ಈ ಪುಣ್ಯಕ್ಷೇತ್ರ ನಿರ್ಲಕ್ಷ್ಯಕ್ಕೊಳಗಾಗಿ ಪಾಳುಬಿದ್ದು ತನ್ನ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತಿದೆ.

ಪುರಸಭೆಯವರೂ ಇದೀಗ ಇಲ್ಲಿನ ಎರಡೂ ತೀರ್ಥಬಾವಿಗಳ ಸುತ್ತಲೂ ತಂತಿಬೇಲಿ ಅಳವಡಿಸಿದ್ದಾರೆ. ನಾಲ್ಕೈದು ದಿನಗಳಿಂದ ಸ್ವಚ್ಛತಾ ಕಾರ್ಯ ಕೈಗೊಂಡು ಜಾತ್ರಾ ಮಹೋತ್ಸವಕ್ಕೆ ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ.

### ಲಿಂಗಾಯತ ಪ್ರಗತಿಶೀಲ ಸಂಘದ 2675ನೇ ಶಿವಾನುಭವ ಕಾರ್ಯಕ್ರಮದಲ್ಲಿ ಭೈರನಹಟ್ಟಿ ಶ್ರೀಗಳು

# ರಾಷ್ಟ್ರಕವಿ ಕುವೆಂಪು ಸೇವೆ ಅಗಾಧ

■ವಿಜಯಸಾಕ್ಷಿ ಸುದ್ದಿ, ಗದಗ

ಬಸವಣ್ಣನವರು ಜಾತಿ-ಮತ-ಪಂಥಗಳನ್ನು ತೊಡೆದು ಸಮಾನತೆಯ ಸಂದೇಶವನ್ನು ಸಾರಿ ವಿಶ್ವಗುರು ಎನಿಸಿದ್ದಾರೆ. ಅಂತೆಯೇ ಕುವೆಂಪು ಅವರು ನಾವೆಲ್ಲರೂ ಭಾರತೀಯರು ಒಂದೇ ಎಂಬ ಸಂದೇಶವನ್ನು ಸಾರಿ ವಿಶ್ವಮಾನವರಾದರು. ಬಸವೇಶ್ವರರ ಬಗ್ಗೆ ಅಪಾರ ಭಕ್ತಿ-ಶ್ರದ್ಧೆಯನ್ನು ಕುವೆಂಪು ಅವರು ಹೊಂದಿದ್ದರು. ಕನ್ನಡ ಸಾರಸ್ವತ ಲೋಕಕ್ಕೆ ಕುವೆಂಪು ಅವರ ಸೇವೆ ಮತ್ತು ಕೊಡುಗೆ ಅಗಾಧವಾದುದು ಎಂದು ಪೂಜ್ಯ ಶ್ರೀ ಮ.ನಿ.ಪ್ರ. ಶಾಂತಲಿಂಗ ಮಹಾಸ್ವಾಮಿಗಳು ನುಡಿದರು.

ಇಲ್ಲಿನ ಲಿಂಗಾಯತ ಪ್ರಗತಿಶೀಲ ಸಂಘದ 2675ನೇ ಶಿವಾನುಭವ ಕಾರ್ಯಕ್ರಮದ ಸಮ್ಮುಖ ವಹಿಸಿ ಶ್ರೀಗಳು ಮಾತನಾಡಿದರು.

ಗದಗ-ಬೆಟಗೇರಿಯ



> 'ಕುವೆಂಪು ಬದುಕು-ಬರಹ' ಕುರಿತು ನರೇಗಲ್ ಶ್ರೀ ಅನ್ನದಾನೀಶ್ವರ ಮಹಾವಿದ್ಯಾಲಯದ ಉಪನ್ಯಾಸಕ ನಾಗರಾಜ ಎಸ್.ಹೊನ್ನೂರ ಅವರು ಉಪನ್ಯಾಸ ನೀಡಿ, ಕುವೆಂಪು ಅವರ ಆತ್ಮವೇ ಕನ್ನಡವಾಗಿತ್ತು, ದೇಹ ಭಾರತವಾಗಿತ್ತು, ವಿಚಾರಗಳು ವಿಶ್ವಮಯವಾಗಿದ್ದವು. ಕನ್ನಡ ನಾಡು-ನುಡಿಗೆ ಕುವೆಂಪು ಅವರ ಕೊಡುಗೆ ಅನನ್ಯ ಮತ್ತು ಅನುಪಮ. ಪ್ರಸ್ತುತ ದಿನಮಾನದ ಮಕ್ಕಳನ್ನು ವಿಶ್ವಮಾನವರನ್ನಾಗಿ ರೂಪಿಸುವಲ್ಲಿ ಕುವೆಂಪು ಅವರ ಪ್ರತಿಯೊಂದು ವಿಚಾರಧಾರೆಗಳು ಅತ್ಯಂತ ಪ್ರಮುಖವಾಗಿವೆ ಎಂದು ಅಭಿಪ್ರಾಯಪಟ್ಟರು.

ಪುನರುತ್ಥಾನ ದೇವಾಲಯದ ರೆವರೆಂಡ್ ಜಾನ್ ಕೆ.ದೊಡಮನಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಪ್ರೇಜ್ ಗಾಸ್ಪೆಲ್ ಮ್ಯೂಜಿಕ್ ತಂಡ, ಬೆಟಗೇರಿ-ಗದಗ ಅವರು ಕ್ರಿಸ್‌ಮಸ್ ಗೀತೆಯನ್ನು ಪ್ರಸ್ತುತಪಡಿಸಿದರು. ಗುರುನಾಥ ಸುತಾರ ಮತ್ತು ಅಶೋಕ ಸುತಾರ ತಂಡದಿಂದ ವಚನ ಸಂಗೀತ ಜರುಗಿತು. ವರ್ಷಾ ಆರ್.ಮಳಜಿ ಧರ್ಮಗ್ರಂಥ ಪಠಣಗೈದರು. ಸನ್ಮತಿ ಎಸ್. ಕಾಟ್ರಳ್ಳಿ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ಸಂಗಮೇಶ ದುಂದೂರು ಹಾಗೂ ಕುಟುಂಬವರ್ಗ ಅವರನ್ನು ಶ್ರೀಗಳು ಸಂಮಾನಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

### ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ 'ರಾಷ್ಟ್ರೀಯ ಯುವ ದಿನೋತ್ಸವ'

# ಯುವಕರಲ್ಲಿ ಇಚ್ಛಾಶಕ್ತಿ ಅವಶ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಹತೋಟಿಯಲ್ಲಿದ್ದರೆ ಮಾತ್ರ ನಮ್ಮ ಗುರಿ ಮತ್ತು ಸಾಧನೆಯ ಶಿಖರವನ್ನು ತಲುಪಲು ಸಾಧ್ಯ. ಪ್ರಸ್ತುತ ದಿನಮಾನಗಳಲ್ಲಿ ಯುವಕರಲ್ಲಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಯುವಕರಲ್ಲಿ ಉತ್ಸಾಹ ಮತ್ತು ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಯುವಕರು ಸ್ವಾಮಿ ವಿವೇಕಾನಂದರ ತತ್ವಗಳನ್ನು ಮೈಗೂಡಿಸಿಕೊಂಡು ಮುಂಬರುವ ದಿನಮಾನಗಳಲ್ಲಿ ಉತ್ತಮ ವ್ಯಕ್ತಿಯಾಗಿ ಜೀವನವನ್ನು ರೂಪಿಸಿಕೊಳ್ಳಬೇಕು. ಯುವಕರಲ್ಲಿ ಏಕಾಗ್ರತೆ ಮತ್ತು ಜ್ಞಾನದ ಜತೆಗೆ ಆಧ್ಯಾತ್ಮಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಕೆಎಲ್ಇ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಎ.ಕೆ. ಮಠ ಹೇಳಿದರು.

ಶಹರದ ಕೆಎಲ್ಇ ಸಂಸ್ಥೆಯ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಶುಕ್ರವಾರ ಜರುಗಿದ ಸ್ವಾಮಿ ವಿವೇಕಾನಂದರ ಜನ್ಮದಿನದ ನಿಮಿತ್ತ 'ರಾಷ್ಟ್ರೀಯ ಯುವ ದಿನೋತ್ಸವ' ಕಾರ್ಯಕ್ರಮದಲ್ಲಿ




> ಸ್ವಾಮಿ ವಿವೇಕಾನಂದರು ಹೇಳುವಂತೆ, ಯುವಕರಲ್ಲಿ ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎನ್ನುವ ರೀತಿಯಲ್ಲಿ ನಾವು ಕೂಡ ಜ್ಞಾನ ಸಂಪಾದನೆಯ ಮೂಲಕ ಕ್ರಿಯಾಶೀಲರಾಗಿ ಸಮಾಜಕ್ಕೆ ಮತ್ತು ದೇಶಕ್ಕೆ ಒಂದು ಕೊಡೆಗೆ ನೀಡಲು ಮುಂದಾಗಬೇಕು. ಸ್ವಾಮಿ ವಿವೇಕಾನಂದರ ತತ್ವಗಳನ್ನು ಇಂದಿನ ಯುವಕರು ಅಳವಡಿಸಿಕೊಂಡು ಪ್ರಸ್ತುತ ಸಮಾಜದಲ್ಲಿ ಉತ್ತಮ ನಾಯಕರಾಗಿ ಬೆಳೆಯಲು ಪ್ರಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಯುವಕರು ಮನಸ್ಸು ಮಾಡಿದರೆ ಮಾತ್ರ ದೇಶದ ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯವಾಗುತ್ತದೆ.
>
> – ಎ.ಕೆ. ಮಠ. ಪ್ರಾಚಾರ್ಯರು, ಕೆಎಲ್ಇ ಮಹಾವಿದ್ಯಾಲಯ.

ಅವರು ಮಾತನಾಡಿದರು.

ಯುವಕರು ಉತ್ಸಾಹ ಮತ್ತು ಕ್ರಿಯಾಶಕ್ತಿಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸುವ ಮೂಲಕ ಗುರಿಯನ್ನು ತಲುಪಬೇಕು. ಇಚ್ಛಾಶಕ್ತಿ ಹೊಂದಿದ್ದರೆ ಮಾತ್ರ ಪ್ರತಿಯೊಂದು ಕಾರ್ಯಗಳಲ್ಲಿ ಯಶಸ್ಸು ಸಾಧಿಸಲು ಮುನ್ನುಡಿಯನ್ನು ಬರೆಯುತ್ತದೆ. ಯುವಕರು ಸರಿಯಾದ ಸಮಯಕ್ಕೆ ಸೂಕ್ತ ಜ್ಞಾನವನ್ನು ಹೊಂದಿರುವ ಗುರುಗಳ ಮಾರ್ಗದರ್ಶನ ಪಡೆದಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಜೈಹನುಮಾನ ಎಚ್.ಕೆ. ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಯುವಕರು ತಾಳ್ಮೆಯನ್ನು ಕಳೆದುಕೊಂಡು ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢವಾಗಲು ಜ್ಞಾನ, ಆಧ್ಯಾತ್ಮಿಕ ಮತ್ತು ಕ್ರೀಡಾ ಮನೋಭಾವನೆ ಬೆಳೆಸಿಕೊಂಡು ಪುಸ್ತಕದ ಜ್ಞಾನವನ್ನು ಮಸ್ತಕದಲ್ಲಿ ಹಿಡಿದಿಟ್ಟುಕೊಳ್ಳುವುದರಿಂದ ಸಾಧನೆ ಮಾಡಲು ಅನುಕೂಲವಾಗುತ್ತದೆ. ಎದುರಾಗುವ ಪ್ರತಿಯೊಂದು ಕಷ್ಟಗಳಿಗೆ ಪುಸ್ತಕದಲ್ಲಿ ಉತ್ತರ ದೊರೆಯದಿದ್ದರೂ ಮಾರ್ಗದರ್ಶನ ಮಾತ್ರ ಖಂಡಿತ ಇರುತ್ತದೆ. ಆದ್ದರಿಂದ ಕಾನೂನು ವಿದ್ಯಾರ್ಥಿಗಳು ಜ್ಞಾನವನ್ನು ಬೆಳೆಸಿಕೊಳ್ಳಲು ಗ್ರಂಥಾಲಯದಲ್ಲಿರುವ ಪುಸ್ತಕಗಳ ಜೊತೆಗೆ ಸ್ನೇಹವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸಿನ ಹಾದಿಯನ್ನು ಕಾಣಲು ಸಾಧ್ಯವಾಗುತ್ತದೆ ಎಂದರು.

ಐಕ್ಯೂಎಸ್ ಸಂಚಾಲಕ ಡಾ. ವಿಜಯ ಮುರದಂಡೆ, ಉಪನ್ಯಾಸಕರಾದ ಎಸ್.ಟಿ. ಮೂರಶಿಳ್ಳಿನ, ಡಾ. ಸಂತೋಷ ಪಾಟೀಲ, ಡಾ. ಜ್ಯೋತಿ ಸಿ.ವಿ., ಶರತ್ ಡಿ, ಡಾ. ಸಿ.ಬಿ. ರಣಗಟ್ಟಿಮಠ ಸೇರಿದಂತೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳುಪಾಲ್ಗೊಂಡಿದ್ದರು. ವಿದ್ಯಾರ್ಥಿ ಶರಣಪ್ಪ ಭದ್ರಾಪೂರ ಸ್ವಾಗತಿಸಿದರು. ಸಂತೋಷ ಭದ್ರಾಪೂರ ನಿರೂಪಿಸಿದರು. ಬಸಯ್ಯ ವೀರಾಪೂರಮಠ ವಂದಿಸಿದರು.

### ಅಯೋಧ್ಯೆ ಆಮಂತ್ರಣ ಪತ್ರಿಕೆ, ಅಕ್ಷತೆ ವಿತರಣಾ ಸಮಾರಂಭದಲ್ಲಿ ಮಾರುತಿ ಕಟ್ಟಿಮನಿ

# ರಾಮಾಯಣವು ನಮ್ಮ ಜೀವನದ ಆದರ್ಶ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಮ್ಮ ಜೀವನವನ್ನು ನಾವು ರಾಮಾಯಣ ಮತ್ತು ಮಹಾಭಾರತದ ಗ್ರಂಥಗಳಲ್ಲಿನ ಆದರ್ಶಗಳ ಮೇಲೆ ಕಟ್ಟಿಕೊಂಡಿದ್ದೇವೆ. ರಾಮಾಯಣವು ನಮಗೆ ಎಂದಿಗೂ ಆದರ್ಶ ಎಂದು ಗದಗ ವಿದ್ಯಾದಾನ ಸಮಿತಿಯ ಪ್ರಾಚಾರ್ಯ ಮಾರುತಿ ಕಟ್ಟಿಮನಿ ಹೇಳಿದರು.

ಪಟ್ಟಣದ ಹಿರೇಮಠದ ಸಭಾಭವನದಲ್ಲಿ ಶುಕ್ರವಾರ ವಿಶ್ವ ಹಿಂದೂ ಪರಿಷತ್ ಏರ್ಪಡಿಸಿದ್ದ ಅಯೋಧ್ಯೆ ಆಮಂತ್ರಣ ಪತ್ರಿಕೆ, ಅಕ್ಷತೆ ವಿತರಣಾ ಸಮಾರಂಭದಲ್ಲಿ ಅವರು ಮುಖ್ಯ ವಕ್ತಾರರಾಗಿ ಪಾಲ್ಗೊಂಡು ಮಾತನಾಡಿದರು.

ಜಗತ್ತಿನಲ್ಲಿ ಅಣ್ಣ-ತಮ್ಮಂದಿರು ಹೇಗೆ ಬದುಕಬೇಕು, ಅವರ ನಡುವಿನ ಸಂಬಂಧ ಹೇಗಿರಬೇಕು ಎಂಬುದನ್ನು ರಾಮಾಯಣ ನಮಗೆ ತಿಳಿಸಿಕೊಡುತ್ತ ಹೋಗುತ್ತದೆ. ರಾಮಾಯಣದ ನಿತ್ಯದ ಪಠಣ ಮತ್ತು ಮಹಾ ಭಾರತದ ಪಠಣ ನಮ್ಮ ಜೀವನಕ್ಕೆ ದಾರಿದೀಪಗಳಾಗಿದ್ದು, ಅವೆರಡೂ ಗ್ರಂಥಗಳು ಈ ದೇಶದ ಅಷ್ಟೇ ಅಲ್ಲದೆ ಜಗತ್ತಿನ ಮಹಾನ್ ಗ್ರಂಥಗಳಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಆರ್. ಕೆ. ಗಚ್ಚಿನಮಠ ಮಾತನಾಡಿ, ಈ ಹಿಂದೆ ರಾಮಾಯಣ, ಮಹಾಭಾರತದ ಪ್ರಸಂಗಗಳು ಪಠ್ಯದಲ್ಲಿ ಕಂಡು ಬರುತ್ತಿದ್ದವು. ಆದರೆ ಈಗ ಅಂತಹ ಯಾವುದೇ ಪ್ರಸಂಗಗಳು ಪಠ್ಯಪುಸ್ತಕದಲ್ಲಿ ಇಲ್ಲ. ಹೀಗಾಗಿ ಇಂದಿನ ಜನಾಂಗ ಅಡ್ಡ ದಾರಿ ಹಿಡಿಯುವ ಕಾರ್ಯ ಹೆಚ್ಚಾಗಿದೆ. ಇನ್ನಾದರೂ ಈ



> ಯಾವುದೇ ಕಾರಣಕ್ಕೂ ಜಾತಕ ಮತ್ತು ನಕ್ಷತ್ರದ ಆಧಾರದ ಮೇಲೆ ವ್ಯಕ್ತಿಯ ಬದುಕು, ವ್ಯಕ್ತಿತ್ವ ನಿರ್ಧಾರವಾಗುವುದಿಲ್ಲ. ಬದಲಾಗಿ ಅವನ ಶ್ರಮ, ಪ್ರಾಮಾಣಿಕತೆ, ನಿಷ್ಠೆಯ ಮೇಲೆ ಅವನ ಬದುಕು ನಿರ್ಧಾರವಾಗುತ್ತದೆ. ರಾಮಾಯಣದಲ್ಲಿ ಹನುಮಂತನ ಪಾತ್ರವು ಸ್ವಾಮಿನಿಷ್ಠೆಗೆ ಉತ್ತಮ ಉದಾಹರಣೆಯಾಗಿದೆ. ಶ್ರೀರಾಮನ ಆದರ್ಶವನ್ನು ನಮ್ಮ ಜೀವನದಲ್ಲಿ ಕಿಂಚಿತ್ತಾದರೂ ಅಳವಡಿಸಿಕೊಳ್ಳುವ ಮೂಲಕ ನಾವು ನಮ್ಮ ಜೀವನವನ್ನು ಹಸನು ಮಾಡಿಕೊಳ್ಳಲು ಪ್ರಯತ್ನಿಸಬೇಕು ಎಂದು ಶ್ರೀ ವಿಶ್ವನಾಥ ಸ್ವಾಮೀಜಿ ಕರೆ ನೀಡಿದರು.

ಗ್ರಂಥಗಳ ಸಂಗತಿಗಳನ್ನು ಪಠ್ಯ-ಪುಸ್ತಕದಲ್ಲಿ ಸೇರಿಸಬೇಕೆಂದು ಅಭಿಪ್ರಾಯಪಟ್ಟರು.

ಸಾನ್ನಿಧ್ಯ ವಹಿಸಿದ್ದ ರೋಣ ಬೂದೀಶ್ವರ ಮಠದ ಶ್ರೀ ವಿಶ್ವನಾಥ ಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀರಾಮನ ಆದರ್ಶಗಳಿಂದಲೇ ಅವನನ್ನು ನಾವೆಲ್ಲರೂ ದೇವರು ಎಂದು ಪೂಜಿಸುತ್ತಿದ್ದೇವೆ. ವಿಶ್ವ ಹಿಂದೂ ಪರಿಷತ್‌ನ ಸತತ ಹೋರಾಟ, ದೇಶದ ಹಿಂದೂಗಳ ಆಶಯದಂತೆ ಈಗ ರಾಮ ಮಂದಿರ ಉದ್ಘಾಟನೆಯಾಗುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ಪ್ರಾರಂಭದಲ್ಲಿ ಗೀತಾ ಭೋಪಳಾಪೂರ ಭಜನೆ ಹಾಡಿದರು. ಸಮಾರಂಭದಲ್ಲಿ ಕರಸೇವೆಯಲ್ಲಿ ಪಾಲ್ಗೊಂಡ ಹನುಮಂತ ಸಕ್ರೋಜಿ, ಫಕೀರಪ್ಪ ಬೊಮ್ಮಲಾಪೂರ ಮತ್ತು ಹನುಮಂತಸಾ ರಾಯಬಾಗಿ ಅವರ ಪರವಾಗಿ ಅವರ ಪತ್ನಿ ಹೇಮಾ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಜಗದೀಶ ಸಂಕನಗೌಡ್ರ ನಿರೂಪಿಸಿದರು. ರಘುನಾಥ ಕೊಂಡಿ ಸ್ವಾಗತಿಸಿದರು. ಮಂಜುನಾಥ ಹೆಗಡೆ ವಂದಿಸಿದರು. ಶ್ರೀಗಳು ವಾರ್ಡಿನ ಪ್ರಮುಖರಿಗೆ ಮಂತ್ರಾಕ್ಷತೆ ಮತ್ತು ಆಮಂತ್ರಣ ಪತ್ರಿಕೆಗಳನ್ನು ವಿತರಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka